ಸಂಪುಟ : 8 ಸಂಚಿಕೆ : 237 ಪುಟ : 4 ಬೆಲೆ : 3.00 ಶುಕ್ರವಾರ ಅಕ್ಟೋಬರ್ 27, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 237 Pages : 4 Price : 3.00 Friday October 27, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಅಕ್ಟೋಬರ್ 27 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂ. 22 ದಖನಿಯವರ ಲೈನ್, ಈಶ್ವರ ಗುಡಿ ಲೈನ್, ಗಿರಣಿ ಲೈನ್, ಶಿವಪ್ಪರ ಲೈನ್, ವಾರ್ಡ್ ನಂ. 27, 30 ಕಾಶಿ ವಿಶ್ವನಾಥ್ ನಗರ, ಅಸೂಟಿಯವರ ಲೈನ್, ಹನುಮಂತ ದೇವರು ಗುಡಿ ಲೈನ್, ದುರ್ಗಮ್ಮ ಗುಡಿ ಲೈನ್, ಕಣವಿಯವರ ಲೈನ್, ಮಾಕೋಟೇಶ್ವರ ಸಂಧಿ, ವಿಆರ್‌ಎಲ್ ಆಫೀಸ್ ಲೈನ್, ಸಂಭಾಪುರ ರೋಡ್ ಮುತ್ತಿನ ಪೆಂಡಿಮಠ ಅವರ ಲೈನ್, ಅಬ್ಬಿಗೇರಿ ಲೇಔಟ್, ಪೊಲೀಸ್ ಕ್ವಾರ್ಟರ್ಸ್, ಪುಟ್ಟರಾಜನಗರ,

ವಾರ್ಡ್ ನಂ. 27 ವೀರನಾರಾಯಣ ಬಡಾವಣೆ, ಕೆ ಎಚ್ ಪಾಟೀಲ್ ಬಡಾವಣೆ, ವಾರ್ಡ್ ನಂ. 21, 22, 23 ಮುನವಳ್ಳಿ ಪ್ಲಾಟ್, ಅಕ್ಕಿಯವರ ಪ್ಲಾಟ್, ಕಮತರ್ ಪ್ಲಾಟ್, ಕಾರದಭಟ್ಟಿ ಲೈನ್, ಜಕ್ಕಲಿಯವರ ಲೈನ್, ಶೇಕಣಪ್ಪ ಲೈನ್, ನಾಗಪ್ಪನ ಕಟ್ಟಿ, ಪಾಟೀಲ ಉಳಿದ ಕೆಲವು ಭಾಗಗಳು, ವಾರ್ಡ್ ನಂ. 29 ಮಸೂತಿ ಹಿಂದಿನ ಭಾಗ-ಮುಂದಿನ ಭಾಗ ಕೆಳಗಿನ ಭಾಗ, ಮೇಲಿನ ಭಾಗ.

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### 'ಕರ್ನಾಟಕ ಸಂಭ್ರಮ-50' ಹಿನ್ನೆಲೆಯಲ್ಲಿ ವಿವಿಧ ಕನ್ನಡಪರ ಸಂಘಟನೆಗಳ ಸಭೆ

# 'ಹೆಸರಾಗಲಿ ಕನ್ನಡ, ಉಸಿರಾಗಲಿ ಕರ್ನಾಟಕ'

■ ವಿಜಯಸಾಕ್ಷಿ ಸುದ್ದಿ, ಗದಗ

ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣವಾಗಿ 50 ವರ್ಷಗಳು ಗತಿಸಿರುವ ಹಿನ್ನೆಲೆಯಲ್ಲಿ ಇದೇ ನವೆಂಬರ್ 2ರಿಂದ ರಾಜ್ಯಾದ್ಯಂತ 'ಹೆಸರಾಗಲಿ ಕನ್ನಡ, ಉಸಿರಾಗಲಿ ಕರ್ನಾಟಕ' ಘೋಷವಾಕ್ಯದೊಂದಿಗೆ ಕರ್ನಾಟಕ ಸಂಭ್ರಮ-50 ವರ್ಷಾಚರಣೆ ನಡೆಸಲಾಗುತ್ತಿದೆ. ಗದುಗಿನಲ್ಲಿ ನ.3ರಂದು ಅರ್ಥಪೂರ್ಣ ಹಾಗೂ ಅದ್ಧೂರಿಯಾಗಿ ಸಂಭ್ರಮಾಚರಣೆ ಆಯೋಜಿಸಲಾಗುತ್ತಿದ್ದು, ಕನ್ನಡಪರ ಸಂಘಟನೆಗಳ ಸಹಭಾಗಿತ್ವದಲ್ಲಿ ಕನ್ನಡಿಗರ ಒಮ್ಮತದ ಹಬ್ಬವಾಗಿ 'ಕರ್ನಾಟಕ ಸಂಭ್ರಮ-50' ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಅವರು ಕೋರಿದರು.

ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಕರ್ನಾಟಕ ಸಂಭ್ರಮ-50ರ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಜರುಗಿದ ಜಿಲ್ಲೆಯ ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಕರ್ನಾಟಕ ಸಂಭ್ರಮ-50 ಕನ್ನಡದ ಹಬ್ಬವಾಗಿ ವಿಜೃಂಭಣೆಯಿಂದ ಆಚರಿಸೋಣ. ಈ ಹಬ್ಬದಲ್ಲಿ ಎಲ್ಲ ಕನ್ನಡಪರ ಸಂಘಟನೆಗಳ ಪಾಲ್ಗೊಳ್ಳುವಿಕೆ ಅಗತ್ಯವಾಗಿದೆ. 1973ರಲ್ಲಿ ಮೈಸೂರು ರಾಜ್ಯಕ್ಕೆ ಕರ್ನಾಟಕ ರಾಜ್ಯ ಎಂದು ಮರುನಾಮಕರಣ ಮಾಡಲಾಯಿತು. ನಂತರ ನಡೆದ ಸಂಭ್ರಮಾಚರಣೆಯು ರಾಜ್ಯದ ಮೂರು ನಗರಗಳಲ್ಲಿ ಅಂದರೆ ಇಂದಿನ ಬೆಂಗಳೂರು, ಹಂಪಿ ಹಾಗೂ ಗದಗ ಜಿಲ್ಲೆಗಳಲ್ಲಿ ವಿಜೃಂಭಣೆಯಿಂದ ಜರುಗಿತು. ಗದುಗಿನಲ್ಲಿ ಜರುಗಿದ ಸಂಭ್ರಮಾಚರಣೆಯಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು, ಮೈಸೂರು ಮಹಾರಾಜರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಗದುಗಿನವರೇ ಆಗಿದ್ದ ಸಚಿವ ದಿ. ಕೆ.ಎಚ್ ಪಾಟೀಲ ಅವರ ನೇತೃತ್ವದಲ್ಲಿ ಗದಗ ನಗರದ ಐತಿಹಾಸಿಕ ವೀರನಾರಾಯಣ ದೇವಸ್ಥಾನದಿಂದ ವಿವಿಧ ಕಲಾತಂಡಗಳ ಸಮ್ಮುಖದಲ್ಲಿ ಮೆರವಣಿಗೆಯು ಆರಂಭವಾಗಿ ಕಾಟನ್‌ಸೇಲ್ ಸೊಸೈಟಿ ಆವರಣ ತಲುಪಿ ಬೃಹತ್ ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ ಜರುಗಿಸಲಾಗಿತ್ತು.

> 1973ರಲ್ಲಿ ಜರುಗಿದ ಸಮಾರಂಭ ಹಾಗೂ ಮೆರವಣಿಗೆಯಂತೆಯೇ ನವೆಂಬರ್ 3ರಂದು ಸಹ ಆ ಗತವೈಭವವನ್ನು ಮರುಕಳಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮದ ಯಶಸ್ಸಿಗೆ ಕನ್ನಡಪರ ಸಂಘಟನೆಗಳು, ಎಲ್ಲಾ ನಾಗರಿಕರೂ ಸಹಾಯ, ಸಹಕಾರ ನೀಡಬೇಕು.
>
> **- ವೈಶಾಲಿ ಎಂ.ಎಲ್.**
> ಜಿಲ್ಲಾಧಿಕಾರಿಗಳು, ಗದಗ.

> ಸಭೆಯಲ್ಲಿ ಕರ್ನಾಟಕ ಸಂಭ್ರಮ-50ರ ಪೂರ್ವಸಿದ್ಧತೆಗಳ ಕುರಿತು ಹಾಗೂ ಅತಿಥಿ, ಗಣ್ಯ ಮಹೋದಯರನ್ನು ಆಹ್ವಾನಿಸುವ ಬಗ್ಗೆ, ಕಾನೂನು ಸುವ್ಯವಸ್ಥೆ, ಸಂಚಾರಿ ವ್ಯವಸ್ಥೆ, ಆಹ್ವಾನ ಪತ್ರಿಕೆ ಸೇರಿದಂತೆ ಕಾರ್ಯಕ್ರಮದ ಸಿದ್ಧತೆಗಳ ಕುರಿತು ಚರ್ಚಿಸಲಾಯಿತು. ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು ಮಾನ್ಯ ಜಿಲ್ಲಾಧಿಕಾರಿಗಳಲ್ಲಿ ಕಾರ್ಯಕ್ರಮಗಳ ಕುರಿತು ತಮ್ಮ ಸಲಹೆ-ಸೂಚನೆಗಳನ್ನು ತಿಳಿಸಿದರು.

ಪ್ರಸ್ತುತ, ಮೆರವಣಿಗೆ ಸಾಗುವ ಬೀದಿಯುದ್ದಕ್ಕೂ ದೀಪಾಲಂಕಾರ, ಪ್ರಮುಖ ವೃತ್ತಗಳಲ್ಲಿ, ಸರ್ಕಾರಿ ಕಟ್ಟಡಗಳಲ್ಲಿ ದೀಪಾಲಂಕಾರ ಮಾಡಲಾಗುತ್ತಿದೆ. ಎಲ್ಲ ಅಲಂಕಾರಗಳು ಸಹ ಕನ್ನಡಮಯ ವಾತಾವರಣವನ್ನು ಇಮ್ಮಡಿಗೊಳಸುವಂತೆ ಈಗಾಗಲೇ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮೆರವಣಿಗೆಯಲ್ಲಿ ಸ್ಥಳೀಯ ಹಾಗೂ ರಾಜ್ಯ ಮಟ್ಟದ ಕಲಾತಂಡಗಳು ಭಾಗವಹಿಸಲಿವೆ. ಜಿಲ್ಲೆಯ ಸಾರ್ವಜನಿಕರೆಲ್ಲರೂ ಸಹ ಈ ಹಬ್ಬವನ್ನು ಸಂಭ್ರಮದಿಂದ ಆಚರಿಸೋಣ ▸▸3ನೇ ಪುಟಕ್ಕೆ

### ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ಸಭೆಯಲ್ಲಿ ಡಿಸಿ ವೈಶಾಲಿ.ಎಂ.ಎಲ್ ಸೂಚನೆ

# ದೋಷರಹಿತ, ಪಾರದರ್ಶಕ ಪರೀಕ್ಷೆ ನಡೆಯಲು ಕಟ್ಟೆಚ್ಚರ ವಹಿಸಿ



■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ದೋಷರಹಿತವಾಗಿ, ವ್ಯವಸ್ಥಿತವಾಗಿ ಹಾಗೂ ಪಾರದರ್ಶಕವಾಗಿ ನಡೆಸಲು ಅಗತ್ಯ ಮುಂಜಾಗ್ರತ ಕ್ರಮಕೈಗೊಳ್ಳುವಂತೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಿರ್ದೇಶನಗಳ ನಿಯಮಾನುಸಾರ ಜಿಲ್ಲೆಯಲ್ಲಿ ತೆರೆಯಲಾಗಿರುವ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿಯೂ ಯಾವುದೇ ಲೋಪವಾಗದಂತೆ, ನ್ಯಾಯಸಮ್ಮತವಾಗಿ ಹಾಗೂ ಪಾರದರ್ಶಕವಾಗಿ ನಡೆಯುವಂತೆ ಅಗತ್ಯ ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸಬೇಕು.

ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಲೋಪಗಳು ನಡೆಯದಂತೆ ಪ್ರತಿ ಪರೀಕ್ಷಾ ಕೊಠಡಿಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸಬೇಕು. ಪರೀಕ್ಷಾ ಕೇಂದ್ರಗಳಿಗೆ ನಿಗದಿಪಡಿಸಿರುವ ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪ್ರತಿ 24ಅಭ್ಯರ್ಥಿಗಳಿಗೆ ಓರ್ವ ಕೊಠಡಿ ಮೇಲ್ವಿಚಾರಕರಂತೆ ಅಗತ್ಯ ಇರುವಷ್ಟು ಮೇಲ್ವಿಚಾರಕ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳುವಂತೆ ಪರೀಕ್ಷಾ ನಿಯೋಜನಾ ಮುಖ್ಯಸ್ಥ ಸಿಬ್ಬಂದಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪರೀಕ್ಷಾ ಕೇಂದ್ರಗಳಲ್ಲಿ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರಿಶೀಲಿಸುವ ಮೂಲಕ ಅಭ್ಯರ್ಥಿಗಳನ್ನು ಪರೀಕ್ಷಾ ಕೇಂದ್ರದೊಳಗೆ ಪ್ರವೇಶಿಸಲು ಅನುಮತಿಸಬೇಕು. ಅಭ್ಯರ್ಥಿಗಳು ಕೊಠಡಿ ಒಳಗೆ ಯಾವುದೇ ರೀತಿಯ ಕೈಗಡಿಯಾರ ಸೇರಿದಂತೆ ಎಲೆಕ್ಟ್ರಾನಿಕ್ಸ್ ಉಪಕರಣಗಳು ಅಭ್ಯರ್ಥಿಗಳ ಬಳಿ ಇರದಂತೆ ಕಟ್ಟೆಚ್ಚರ ವಹಿಸಬೇಕು. ಜತೆಗೆ, ಪರೀಕ್ಷೆಗೆ ಹಾಜರಾದ ಹಾಗೂ ಗೈರಾದ ಅಭ್ಯರ್ಥಿಗಳ ವಿವರಗಳನ್ನು ಆನ್‌ಲೈನ್ ಮೂಲಕ ದಾಖಲಿಸಲು ಪರೀಕ್ಷಾ ಕೇಂದ್ರದ ಪ್ರಾಂಶುಪಾಲರಿಗೆ ನಿರ್ದೇಶನ ನೀಡುವಂತೆ ಜಿಲ್ಲಾಧಿಕಾರಿ ಸೂಚನೆ ನೀಡಿದರು.

ಇದೇ ಅ. 28 ಹಾಗೂ 29ರಂದು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ▸▸3ನೇ ಪುಟಕ್ಕೆ

### ದತ್ತಪೀಠದಲ್ಲಿನ ಅನಧಿಕೃತ ಗೋರಿಗಳ ಸ್ಥಳಾಂತರಕ್ಕೆ ರಾಜು ಖಾನಪ್ಪನವರ್ ಆಗ್ರಹ

# ನ. 5ರಂದು ಚಿಕ್ಕಮಗಳೂರಿನಲ್ಲಿ ಶೋಭಾಯಾತ್ರೆ, ಧರ್ಮಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ

ಚಿಕ್ಕಮಗಳೂರಿನ ದತ್ತಾತ್ರೇಯ ಪವಿತ್ರ ಕ್ಷೇತ್ರ ದತ್ತ ಪೀಠದಲ್ಲಿ ಕೆಲ ಮತೀಯ ಶಕ್ತಿಗಳು ಅನಧಿಕೃತವಾಗಿ ಸ್ಥಾಪಿಸಿರುವ ಗೋರಿಗಳನ್ನು ಕೂಡಲೇ ತೆರವುಗೊಳಿಸಬೇಕು ಎನ್ನುವುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗಾಗಿ ಹಕ್ಕೊತ್ತಾಯ ಮಾಡುವ ಮೂಲಕ ಈ ಬಾರಿಯ ದತ್ತಮಾಲಾ ಅಭಿಯಾನ ರಾಜ್ಯದಾದ್ಯಂತ ನಡೆಯಲಿದೆ ಎಂದು ಶ್ರೀರಾಮ್‌ಸೇನೆ ರಾಜ್ಯ ಘಟಕದ ಕಾರ್ಯದರ್ಶಿ ರಾಜು ಖಾನಪ್ಪನವರ್ ತಿಳಿಸಿದರು.

ದತ್ತಪೀಠ ಹಿಂದೂಗಳ ಪವಿತ್ರಕ್ಷೇತ್ರ. ಸರ್ಕಾರದ ಎಲ್ಲಾ ದಾಖಲೆಗಳಲ್ಲಿಯೂ ಇನಾಂ ದತ್ತಾತ್ರೇಯ ಪೀಠ ಎಂದೇ ಉಲ್ಲೇಖವಿದೆ. ಆದರೂ ಇಂಥಹ ಪವಿತ್ರ ಸ್ಥಳವನ್ನು ಕೆಲ ಇಸ್ಲಾಮಿಕ್ ಮತಾಂಧರು ಅತಿಕ್ರಮಣ ಮಾಡಿಕೊಳ್ಳುವ ಮೂಲಕ ಕ್ಷೇತ್ರವನ್ನು ಬಾಬಾಬುಡನ್‌ಗಿರಿ



ದರ್ಗಾ ಎಂದು ಸುಳ್ಳು ಹೇಳುವ ಮೂಲಕ ಹಿಂದೂ ಧಾರ್ಮಿಕ ಭಾವನೆಗಳಿಗೆ, ಹಿಂದೂ ಧಾರ್ಮಿಕ ಹಕ್ಕಿಗೆ ಕಂಟಕವಾಗುವ ಮೂಲಕ ಸೌಹಾರ್ದತೆ ಕದಡುವ ಪ್ರಯತ್ನ ಮಾಡುತ್ತಿದ್ದಾರೆ. ಇಂಥಹ ಅತಿಕ್ರಮಣ ವಿರುದ್ಧ ದತ್ತಮಾಲಾ ಅಭಿಯಾನ ಈ ಬಾರಿ ವಿಶೇಷ ರೀತಿಯಲ್ಲಿ ನಡೆಯಲಿದೆ ಎಂದು ನಗರದ ಪತ್ರಿಕಾ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಇಂಥಹ ಅತಿಕ್ರಮಣದ ವಿರುದ್ಧ ಕಳೆದ 19ವರ್ಷಗಳಿಂದಲೂ ಸತತ ಹೋರಾಟ ನಡೆಸುವ ಮೂಲಕ ಪೀಠ ಹಿಂದೂಗಳ ಪವಿತ್ರಕ್ಷೇತ್ರ ಎಂಬುದು ಸಾಬೀತಾಗಿದೆ. ಅಲ್ಲಿನ ಅನಧಿಕೃತ ಗೋರಿಗಳ ಮೇಲೆ ಹಾರಿಸಲಾಗಿದ್ದ ▸▸3ನೇ ಪುಟಕ್ಕೆ

> ಕೆಲ ಮತೀಯ ಶಕ್ತಿಗಳು ದತ್ತಪೀಠದಲ್ಲಿ ಸ್ಥಾಪಿಸುತ್ತಿರುವ ಅಕ್ರಮ ಹಾಗೂ ಅನಧಿಕೃತ ಗೋರಿಗಳನ್ನು ಸರ್ಕಾರಿ ದಾಖಲೆಗಳ ಪ್ರಕಾರ ಅಲ್ಲಿಂದ 14ಕಿ.ಮೀ.ದೂರದ ನಾಗೇನಹಳ್ಳಿ ಬಾಬಾಬುಡನ್ ದರ್ಗಾಕ್ಕೆ ಸ್ಥಳಾಂತರಿಸಬೇಕು. ದತ್ತಪೀಠವನ್ನು ಸರ್ಕಾರ ಅಧಿಕೃತವಾಗಿ ಹಿಂದೂ ಪೀಠ ಎಂದು ಘೋಷಿಣೆ ಸೇರಿದಂತೆ ದತ್ತಮಾಲಾ ಅಭಿಯಾನ ಹಮ್ಮಿಕೊಳ್ಳಲಾಗಿದೆ.
>
> **-ರಾಜು ಖಾನಪ್ಪನವರ್,** ಶ್ರೀರಾಮಸೇನೆಯ ರಾಜ್ಯ ಕಾರ್ಯದರ್ಶಿ

# ಎತ್ತರ ಜಿಗಿತದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಇತ್ತೀಚೆಗೆ ಕೆ.ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 2023-24ನೇ ಸಾಲಿನ ಜಿಲ್ಲಾ ಮಟ್ಟದ ಇಲಾಖಾ ಕ್ರೀಡಾಕೂಟದಲ್ಲಿ ಕುರ್ತಕೋಟಿಯ ಸರಕಾರಿ ಮಾದರಿ ಕನ್ನಡ ಹೆಣ್ಣು ಮಕ್ಕಳ ಶಾಲೆಯ ವಿದ್ಯಾರ್ಥಿನಿ ಯೋಗಿನಿ ಗಿರೀಶ ಹೊಸಮನಿ ಎತ್ತರ ಜಿಗಿತ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.

ಸಾಧಕ ವಿದ್ಯಾರ್ಥಿನಿಗೆ ಹಾಗೂ ತರಬೇತಿ ನೀಡಿದ ದೈಹಿಕ ಶಿಕ್ಷಣ ಶಿಕ್ಷಕಿ ವನಜಾಕ್ಷಿ ಕೆ ಇವರಿಗೆ ಗ್ರಾಮದ ಗಣ್ಯರಾದ ಅಪ್ಪಣ್ಣ ಇನಾಮತಿ, ಮುಖ್ಯೋಪಾಧ್ಯಾಯರಾದ ಡಿ.ಸಿ ಬಿಳೆಬಾಳ, ಗುರುವೃಂದದವರು, ಎಸ್‌ಡಿಎಮ್‌ಸಿ ಅಧ್ಯಕ್ಷರು, ಸರ್ವ ಸದಸ್ಯರು, ಪಾಲಕರು ಮತ್ತು ಊರಿನ ಗಣ್ಯರು ಶುಭಕೋರಿ ರಾಜ್ಯಮಟ್ಟದಲ್ಲಿಯೂ ಸಾಧನೆಗೈದು ಗ್ರಾಮಕ್ಕೆ ಹಾಗೂ ಜಿಲ್ಲೆಗೆ ಕೀರ್ತಿ ತರಲೆಂದು ಹಾರೈಸಿದ್ದಾರೆ.



# ರೈತನಿಗೆ ಸೂಕ್ತ ಪರಿಹಾರ ಒದಗಿಸಲು ಆಗ್ರಹ



■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಬೆಳೆ ಹಾನಿಗೊಳಗಾದ ರೈತನಿಗೆ ಸೂಕ್ತ ಪರಿಹಾರ ಒದಗಿಸಬೇಕೆಂದು ಒತ್ತಾಯಿಸಿ, ತಾಲೂಕಿನ ತಾಮ್ರಗುಂಡಿ ಗ್ರಾಮದ ಸಣ್ಣ ನೀರಾವರಿ ಕೆರೆಯ ನೀರಿನ ಗೇಟಿಗೆ ಬೀಗ ಹಾಕಿ, ತಾಲೂಕಾ ಸಾರ್ವಜನಿಕ ಹೋರಾಟ ವೇದಿಕೆಯ ಪದಾಧಿಕಾರಿಗಳು ಆಗ್ರಹಿಸಿದರು.

ಈ ವೇಳೆ ಹೋರಾಟ ವೇದಿಕೆಯ ಸಂಚಾಲಕ ಬಸವರಾಜ ನವಲಗುಂದ ಮಾತನಾಡಿ, ತಾಮ್ರಗುಂಡಿ ಕೆರೆಯ ಮುಂಭಾಗದಲ್ಲಿ ಭೂಸ್ವಾಧೀನ ಮಾಡಿಕೊಳ್ಳುವ ಮುಂಚಿತವಾಗಿ ರೈತನ ಹೊಲದಲ್ಲಿ ನಾಶವಾದ ತೋಟಗಾರಿಕೆ ಬೆಳೆಗಳಾದ ತೆಂಗು, ಪೇರಲ, ಚಿಕ್ಕು, ಮಾವು, ಪಪ್ಪಾಯ, ಹುಣಸೆ ಮರಗಳು, ಅಪಾರ ಬೆಳೆಗಳು ನಾಶವಾಗಿ ಇಪ್ಪತ್ತು ವರ್ಷ ಗತಿಸಿದರೂ ಪರಿಹಾರ ಸಿಕ್ಕಿಲ್ಲ. ಒಂದು ವಾರದೊಳಗೆ ಪರಿಹಾರ ಕೊಡಬೇಕು. ಇಲ್ಲವಾದಲ್ಲಿ ಪುನಃ ಪ್ರತಿಭಟನೆ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಸಣ್ಣ ನೀರಾವರಿ ಇಲಾಖೆಯ ಅಭಿಯಂತರರು ಪ್ರತಿಭಟನೆಯ ಸ್ಥಳಕ್ಕೆ ಬರಬೇಕು ಎಂದು ಪಟ್ಟು ಹಿಡಿದರು. ನಂತರ ಆಗಮಿಸಿದ ತಹಸೀಲ್ದಾರ ಧನಂಜಯ ಮಾಲಗುತ್ತಿಯವರು ರೈತನಿಗಾದ ಅನ್ಯಾಯವನ್ನು ಸರಿಪಡಿಸಲು ಅಧಿಕಾರಿಗಳಿಗೆ ಸೂಚಿಸಿ, ಮನವಿ ಸ್ವೀಕರಿಸಿದರು. ಪೊಲೀಸ್ ಸಿಬ್ಬಂದಿಗಳು ಸ್ಥಳದಲ್ಲಿ ಹಾಜರಿದ್ದರು. ಈ ಸಂದರ್ಭದಲ್ಲಿ ಸುಭಾಷ ಕುಂಬಾರ, ಮಂಜುನಾಥ ಹುಬ್ಬಳ್ಳಿ, ರಮೇಶ ರಾಮೇನಳ್ಳಿ, ಬಸಪ್ಪ ವಡ್ಡರ, ಪ್ರಕಾಶ ವಡ್ಡರ, ಅಪ್ಪಣ್ಣ ವಡ್ಡರ ಉಪಸ್ಥಿತರಿದ್ದರು.

# ಆರ್ಯವೈಶ್ಯ ಅಭಿವೃದ್ಧಿ ನಿಗಮದಿಂದ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮವು ಪ್ರಸಕ್ತ ಸಾಲಿನಲ್ಲಿ ಅರಿವು ಶೈಕ್ಷಣಿಕ ಸಾಲ ಯೋಜನೆಯ ಅನುಷ್ಠಾನಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಈ ಯೋಜನೆ ಅಡಿ ಸಾಲ ಸೌಲಭ್ಯ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಆನ್‌ಲೈನ್ ವಿಳಾಸ: kacdc.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ನ.30 ಕೊನೆಯ ದಿನವಾಗಿದೆ.

ಅರಿವು ಶೈಕ್ಷಣಿಕ ಸಾಲ ಯೋಜನೆಯ ಅರ್ಹತೆ ಹಾಗೂ ಹೆಚ್ಚಿನ ಮಾಹಿತಿಗಾಗಿ, ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮ, ಜಿಲ್ಲಾ ಆಡಳಿತಭವನ, ಕೊಠಡಿ ಸಂಖ್ಯೆ: 202, 2ನೇ ಮಹಡಿ, ಗದಗಈ ವಿಳಾಸ ಸಂಪರ್ಕಿಸಬಹುದು. ಇಲ್ಲವೇ ವಿವರಗಳನ್ನು kacdc.karnataka.gov.in ವೆಬ್‌ಸೈಟ್‌ನಲ್ಲಿಯೂ ತಿಳಿಯಬಹುದುಎಂದುಕಚೇರಿ ಪ್ರಕಟಣೆ ತಿಳಿಸಿದೆ.

### ಗದಗ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಮನವಿ

# ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರಿಗೆ ಬಡ್ತಿ ನೀಡಿ



■ ವಿಜಯಸಾಕ್ಷಿ ಸುದ್ದಿ, ಗದಗ

ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಕರನ್ನು ಪ್ರೌಢಶಾಲೆಯ ದೈಹಿಕ ಶಿಕ್ಷಕರೆಂದು ಬಡ್ತಿ ನೀಡಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಬೆಂಗಳೂರು, ಗದಗ ಜಿಲ್ಲಾ ಘಟಕವು ಗದಗ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಗುರುವಾರ ಮನವಿ ಸಲ್ಲಿಸಿದೆ.

ಬಿ.ಪಿ.ಇಡಿ ವಿದ್ಯಾರ್ಹತೆ ಹೊಂದಿ, ಪ್ರಾಥಮಿಕ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-2 ಹುದ್ದೆಯಿಂದ ಸರಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಗೆ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು ಇವರ ಉಲ್ಲೇಖದನ್ವಯ ಬಡ್ತಿ ನೀಡಬೇಕು ಎಂದು ಮನವಿಯಲ್ಲಿ ವಿವರಿಸಲಾಗಿದೆ.

> ಸರಕಾರದ ನಿಯಮಾನುಸಾರ ಗ್ರೇಡ್-1 ಹುದ್ದೆಗೆ ಬಡ್ತಿ ನೀಡಿ ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರಿಗೆ ಅನುಕೂಲ ಮಾಡಿಕೊಡಬೇಕೆಂದು ಗದಗ ಜಿಲ್ಲಾ ಸಂಘದ ಅಧ್ಯಕ್ಷ ವ್ಹಿ.ಎಂ ಹಿರೇಮಠ, ಪ್ರಧಾನ ಕಾರ್ಯದರ್ಶಿ ಮಹೇಶ ಕುರಿಯವರ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳು, ದೈಹಿಕ ಶಿಕ್ಷಕರು ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿದ ಗದಗ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ ರಡ್ಡೇರ, ಈ ಕುರಿತು ಇಲಾಖೆಯ ನಿಯಮಾನುಸಾರ ಅಗತ್ಯ ಕ್ರಮ ಜರುಗಿಸುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸಂಘದ ಸಹ ಕಾರ್ಯದರ್ಶಿ ಎಂ.ಪಿ ಮೆಣಸಿನಕಾಯಿ, ಗ್ರಾಮೀಣ ಘಟಕದ ಅಧ್ಯಕ್ಷ ಎಸ್.ಆರ್ ಬಂಡಿ, ಕಾರ್ಯದರ್ಶಿ ಎನ್.ಎಚ್ ಪಾಟೀಲ, ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಬಿ ಕೊಣ್ಣೂರ, ಮುಂಡರಗಿ ಘಟಕದ ಅಧ್ಯಕ್ಷ ಎಸ್.ಟಿ ಸಜ್ಜನವರ, ಗಜೇಂದ್ರಗಡ ಘಟಕದ ಅಧ್ಯಕ್ಷ ವ್ಹಿ.ಎಂ ಹಾದಿಮನಿ, ಎಸ್.ಎಸ್ ಪಾಟೀಲ ಉಪಸ್ಥಿತರಿದ್ದರು.

ದೈಹಿಕ ಶಿಕ್ಷಕರಾದ ಎ.ಎಂ ನಾಲಬಂದ, ಮಹಾಂತೇಶ ಕೊನೇರಿ, ಎಸ್.ಎನ್ ಗೌಡನಾಯ್ಕರ್, ವ್ಹಿ.ಎಸ್ ಚಿಕ್ಕಮಠ, ಕೆ.ಎಸ್ ಸೊಂಟಿ, ಕೆ.ಎ ಹೊಳಗುಂದಿ, ಸಿ.ಎ ಹಿರೇಮಠ, ಶೈಲಾ ಹಿರೇಹಳ್ಳಿ, ವೈ.ಕೆ ಬುಡ್ಡಮ್ಮನವರ, ಎಸ್.ಎಚ್ ಪಾಟೀಲ, ಎಸ್.ಎಂ ಡಂಬಳ, ಎಸ್.ಬಿ ಅಬ್ಬಿಗೇರಿ, ವ್ಹಿ.ಟಿ ಕಲಕಂಬಿ, ಸಿ.ಟಿ ಅರಳಿಮಠ ಮುಂತಾದವರಿದ್ದರು.

## ಸಾಕ್ಷಿ ಸುಭಾಷಿತ

ಗುಣವೊಂದೇ ಗೋರವಕ್ಕೆ ಅರ್ಹವಾದದ್ದು,
ರೂಪವೂ ಅಲ್ಲ, ಧನವೂ ಅಲ್ಲ.
–ಸುಭಾಷಿತ

## ಸಂಪಾದಕೀಯ

# ಬಡತನಕ್ಕೆ ಆರೋಗ್ಯ ವೆಚ್ಚವೇ ಕಾರಣ

ಭಾರತ ಮುಂದುವರಿಯುತ್ತಿರುವ ದೇಶಗಳ ಸಾಲಿನಲ್ಲಿ ಮುಂಚೂಣಿಯಲ್ಲಿದೆ. ದೇಶದ ಜಿಡಿಪಿ ಬೆಳವಣಿಕೆಯಾಗುತ್ತಿದೆ. ಸದ್ಯದ ಜಿಡಿಪಿ ಪ್ರಕಾರ ಭಾರತ ವಿಶ್ವದ 5ನೇ ಅತಿದೊಡ್ಡ ಆರ್ಥಿಕ ಶಕ್ತಿ ಹೊಂದಿದ ದೇಶವಾಗಿದೆ. ಆದರೂ ಭಾರತದಲ್ಲಿ ಪ್ರತಿ ವರ್ಷ 6 ಕೋಟಿಗೂ ಹೆಚ್ಚು ಜನ ಬಡವರಾಗುತ್ತಿದ್ದಾರೆ.

ಒಂದೆಡೆ ಆರ್ಥಿಕವಾಗಿ ದೇಶ ಬಲಾಢ್ಯವಾಗುತ್ತಿದ್ದರೆ ದೇಶದ ಜನ ಬಡವರಾಗುತ್ತಿರುವುದಕ್ಕೆ ವೈದ್ಯಕೀಯ ವೆಚ್ಚವೇ ಕಾರಣ ಎನ್ನುವುದು ಸಂಶೋಧನೆಯೊಂದರಿಂದ ಬಯಲಾಗಿದೆ. ದೇಶದ ಆರ್ಥಿಕ ಬೆಳವಣಿಗೆಯ ಮಧ್ಯೆಯೂ ಜಿ 20 ರಾಷ್ಟ್ರಗಳಲ್ಲಿ ಭಾರತ ಈಗಲೂ ಬಡ ದೇಶವಾಗಿದೆ. ಅದರಲ್ಲೂ ಹಸಿವಿನಿಂದ ಬಳಲುತ್ತಿರುವವರ ಸಂಖ್ಯೆ ಐದು ವರ್ಷಗಳಲ್ಲಿ 19 ಕೋಟಿಯಿಂದ 35 ಕೋಟಿಗೆ ಏರಿಕೆಯಾಗಿರುವುದು ಆತಂಕಕಾರಿ ವಿಷಯವಾಗಿದೆ.

ಇದೆಲ್ಲದರ ಮಧ್ಯೆ ದೇಶದ 6 ಕೋಟಿ ಜನ ಪ್ರತಿ ವರ್ಷ ಬಡವರಾಗುತ್ತಿದ್ದಾರೆ. ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದ ಜನರೆ ಈ ರೀತಿ ಬಡವರಾಗುತ್ತಿರುವುದಕ್ಕೆ ವೈದ್ಯಕೀಯ ವೆಚ್ಚ ಕಾರಣ ಎನ್ನುವುದು ಸ್ಪಷ್ಟವಾಗುತ್ತದೆ. ದೇಶದ ಯಾವುದೇ ರಾಜ್ಯದಲ್ಲಿಯೂ ಜನಸಾಮಾನ್ಯರಿಗೆ ಈಗಲೂ ಗುಣಮಟ್ಟದ ಚಿಕಿತ್ಸೆ ದೊರೆಯುತ್ತಿಲ್ಲ. ಹೀಗಾಗಿ ತಮ್ಮವರ ಜೀವ ಉಳಿಸಿಕೊಳ್ಳಲು ಮಧ್ಯಮ ವರ್ಗದ ಜನ ಅನಿವಾರ್ಯವಾಗಿ ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗುತ್ತಾರೆ. ಜೀವಮಾನವಿಡಿ ಕೂಡಿಟ್ಟ ಹಣವನ್ನು ಆಸ್ಪತ್ರೆಗೆ ಸುರಿಯುತ್ತಾರೆ. ಅಂತಿಮವಾಗಿ ಬರಿಗೈನಿಂದ ಮರಳುತ್ತಾರೆ.

ಹೀಗೆ ಒಂದು ಬಾರಿ ಗಂಭೀರ ಕಾಯಿಲೆಗಾಗಿ ಸರಕಾರಿ ಆಸ್ಪತ್ರೆಗೆ ಹೋಗಿ ಬಂದವರು ಪುನಃ ಆರ್ಥಿಕವಾಗಿ ಸಬಲರಾಗುವುದು ಕಷ್ಟ ಸಾಧ್ಯ. ಅದಕ್ಕೆ ಮುಖ್ಯ ಕಾರಣ ವೈದ್ಯಕೀಯ ವೆಚ್ಚ ಹೆಚ್ಚಾದಂತೆ ಆರಂಭದಲ್ಲಿಯೇ ಸಾಲ ಮಾಡುತ್ತಾರೆ. ಖರ್ಚು ಮತ್ತೆ ಹೆಚ್ಚಾದಾಗ ಉಳಿತಾಯದ ಹಣವನ್ನು ಬಳಕೆ ಮಾಡುತ್ತಾರೆ. ಇನ್ನೂ ಹೆಚ್ಚಾದರೆ ಸ್ಥಿರಾಸ್ಥಿಯನ್ನೂ ಮಾರಾಟ ಮಾಡುತ್ತಾರೆ. ಎಲ್ಲ ಕಳೆದುಕೊಂಡು ಆಸ್ಪತ್ರೆಯಿಂದ ಮರಳಿದರೂ ಸಾಲ ಹಾಗೆಯೇ ಉಳಿಯುತ್ತದೆ. ಸಾಲ ತೀರಿಸುವ ಜವಾಬ್ದಾರಿಯೊಂದಿಗಿನ ಜೀವನ ಆ ವ್ಯಕ್ತಿ ಅಥವಾ ಕುಟುಂಬವನ್ನು ಮಧ್ಯಮ, ಕೆಳ ಮಧ್ಯಮ ವರ್ಗದಿಂದ ಬಡವರನ್ನಾಗಿ ಮಾಡುತ್ತದೆ.

ಭಾರತ ಇವತ್ತು ಎಲ್ಲ ಕ್ಷೇತ್ರಗಳಲ್ಲಿ ಮುಂದಿದೆ. ವಿಜ್ಞಾನ- ತಂತ್ರಜ್ಞಾನ, ರಾಜಕೀಯ, ಕ್ರೀಡೆಯಲ್ಲಿ ಸಾಕಷ್ಟು ಸಾಧನೆ ಮಾಡಿದೆ. ಆದರೂ ದೇಶದಲ್ಲಿ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದ ಜನ ಬಯಸುವಂಥ ಆರೋಗ್ಯ ಸೇವೆ ದೊರೆಯುತ್ತಿಲ್ಲ. ಸರಕಾರ ಈ ಕೊರತೆಯನ್ನು ನೀಗಿಸಲು ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಆದರೆ ಅವು ತಾಂತ್ರಿಕ ಕಾರಣಗಳಿಂದ ಲಭ್ಯರಾಗದೆ ಜನ ಒಂದೊ ಖಾಸಗಿ ಆಸ್ಪತ್ರೆ ಮೊರೆ ಹೋಗಬೇಕು, ಇಲ್ಲವೇ ಸರಕಾರಿ ಆಸ್ಪತ್ರೆಯಲ್ಲಿ ಪ್ರಾಣ ತ್ಯಾಗ ಮಾಡಬೇಕಾದ ಪರಿಸ್ಥಿತಿ ಇದೆ.

ಬಹುತೇಕ ಮುಂದುವರಿದ ದೇಶಗಳಲ್ಲಿ ಆರೋಗ್ಯ ಮತ್ತು ಶಿಕ್ಷಣ ಅತ್ಯಂತ ಗುಣಮಟ್ಟದಿಂದ ಕೂಡಿದೆ. ಆರೋಗ್ಯ ವೆಚ್ಚದ ಕಾರಣಕ್ಕೆ ವ್ಯಕ್ತಿಯೊಬ್ಬನ ಆರ್ಥಿಕ ಸ್ಥಿತಿ ಬದಲಾಗುವುದು ಒಳ್ಳೆಯ ಬೆಳವಣಿಗೆ ಅಲ್ಲ. ಸರಕಾರ ಗುಣಮಟ್ಟದ ವೈದ್ಯಕೀಯ ಸೇವೆ ನೀಡಬೇಕು ಇಲ್ಲವೇ ವೈದ್ಯಕೀಯ ಕ್ಷೇತ್ರವನ್ನು ರಾಷ್ಟ್ರೀಕರಣ ಮಾಡಬೇಕು. ವೈದ್ಯಕೀಯ ಸೇವೆ ಎನ್ನುವುದು ದುಡ್ಡು ಮಾಡುವ ದಂಧೆಯಾಗಿ ಬದಲಾಗಿರುವುದರಿಂದ ರಾಷ್ಟ್ರೀಕರಣ ಕನಸಿನ ಮಾತು. ಸದ್ಯಕ್ಕೆ ಸರಕಾರಿ ಆಸ್ಪತ್ರೆ ಬಲಪಡಿಸುವತ್ತ ಚಿತ್ತ ಹರಿಯಬೇಕಿದೆ.

# ಸಡಗರ-ಸಂಭ್ರಮದ ವಿಜಯದಶಮಿ ಹಬ್ಬ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದಲ್ಲಿ ವಿಜಯದಶಮಿ ಹಬ್ಬವನ್ನು ಸಡಗರ; ಸಂಭ್ರಮದಿಂದ ಆಚರಿಸಲಾಯಿತು. ದಸರಾ ಹಬ್ಬದ ನಿಮಿತ್ಯ ಇಲ್ಲಿನ ಗ್ರಾಮದೇವತೆ ದೇವಸ್ಥಾನ, ದುರ್ಗಾದೇವಿ ದೇವಸ್ಥಾನ, ಅಂಬಾಭವಾನಿ ದೇವಸ್ಥಾನ, ರೇಣುಕಾದೇವಸ್ಥಾನ, ಬನಶಂಕರಿ ದೇವಸ್ಥಾನದಲ್ಲಿ ದೇವಿಯ ಮೂರ್ತಿಗಳಿಗೆ ಒಂಬತ್ತು ದಿನಗಳ ಕಾಲ ಧಾರ್ಮಿಕ ವಿಧಿ ವಿಧಾನಗಳ ಮೂಲಕ ವಿಶೇಷ ಪೂಜೆ ಹಾಗೂ ಪುರಾಣ ಪ್ರವಚನಗಳನ್ನು ನೆರವೇರಲಾಯಿತು.

ಅಸಂಖ್ಯಾತ ಭಕ್ತರು ದೇವಸ್ಥಾನಗಳಿಗೆ ತೆರಳಿ ದೇವರ ದರ್ಶನ ಪಡೆದು ಪುನೀತರಾದರು. ಎಲ್ಲಾ ದೇವಸ್ಥಾನಗಳ ಪಾಲಕಿಗಳನ್ನು ಮಂಗಳ ವಾದ್ಯಗಳೊಂದಿಗೆ ದೇವಸ್ಥಾನದಿಂದ ಹೊರಟುಊರಿನ ಹೋರ ವಲಯದಲ್ಲಿನ ಬನ್ನಿ(ಶಮಿ) ವೃಕ್ಷಕ್ಕೆಗ್ರಾಮದ ಮುಖ್ಯಸ್ಥರ ಸಮ್ಮುಖದಲ್ಲಿ ಪೂಜೆ ಸಲ್ಲಿಸಿದ ಬಳಿಕ ಭಕ್ತವೃಂದ ಬನ್ನಿಯನ್ನು ವಿನಿಮಯ ಮಾಡುವ ಮೂಲಕ 'ಬನ್ನಿ ತೆಗೆದುಕೊಂಡು ಬಂಗಾರದಂತೆ ಇರೋಣ' ಎಂಬ ಆಶಯ ದೊಂದಿಗೆ ಪರಸ್ಪರ ಶುಭಾಶಯ ಕೋರಿದರು.

## ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ. ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ.. ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.

E-mail: vijayasakshidaily@gmail.com
ಮೊ : 9019256545

## ಜನಜಾಗೃತಿ ಧರ್ಮ ಸಮಾರಂಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ಸುಖ-ಶಾಂತಿಯ ಬದುಕಿಗೆ ಧರ್ಮವೊಂದೇ ಆಶಾಕಿರಣ



■ವಿಜಯಸಾಕ್ಷಿ ಸುದ್ದಿ, ಸುರಪುರ

ಜೀವನದ ಉನ್ನತಿಗೆ ಧರ್ಮ ಪರಿಪಾಲನೆಯ ಅವಶ್ಯಕತೆಯಿದೆ. ಮೌಲ್ಯಾಧಾರಿತ ಜೀವನ ಕ್ರಮ ಶ್ರೇಯಸ್ಸಿಗೆ ಮೂಲ. ಸುಖ-ಶಾಂತಿಯ ಬದುಕಿಗೆ ಧರ್ಮವೊಂದೇ ಆಶಾಕಿರಣವಾಗಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ತಾಲೂಕಿನ ಕೆಂಭಾವಿ ಶ್ರೀ ಗುರು ಕಾಂತೇಶ್ವರ ಹಿರೇಮಠದಲ್ಲಿ ಜಗನ್ಮಾತೆ ಶ್ರೀದೇವಿ ಮತ್ತು ಶ್ರೀ ವೀರಭದ್ರೇಶ್ವರ ಮೂರ್ತಿ ಪ್ರತಿಷ್ಠಾಪನಾ ಅಂಗವಾಗಿ ಜರುಗಿದ ಜನಜಾಗೃತಿ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಭಾರತೀಯ ಸಂಸ್ಕೃತಿಯಲ್ಲಿ ಧರ್ಮ ಮತ್ತು ಆಧ್ಯಾತ್ಮ ಚಿಂತನೆಗಳಿಗೆ ಮಹತ್ವವಿದೆ. ಅಶಾಂತಿಯಿಂದ ತತ್ತರಿಸುತ್ತಿರುವ ಮನುಷ್ಯನ ಬಾಳಿಗೆ ಧರ್ಮಾಚರಣೆ ಇಲ್ಲದೇ ಹೋದರೆ ಬಹಳಷ್ಟು ತೊಂದರೆಗಳು ಜರುಗುವುದರಲ್ಲಿ ಯಾವುದೇ ಅನುಮಾನವಿಲ್ಲ. ನಡೆ-ನುಡಿಯಲ್ಲಿ ಒಂದಾಗಿ ಬಾಳುವುದೇ ನಿಜವಾದ ಧರ್ಮ. ಶ್ರೀ ಜಗದ್ಗುರು ರೇಣುಕಾಚಾರ್ಯರು ಅಹಿಂಸಾದಿ ಧ್ಯಾನ ಪರ್ಯಂತರ ದಶಧರ್ಮ ಸೂತ್ರಗಳನ್ನು ಬೋಧಿಸಿದ್ದಾರೆ. ಜೀವನ ವಿಕಾಸಕ್ಕೆ ದಶಧರ್ಮ ಸೂತ್ರಗಳು ಎಲ್ಲರ ಬಾಳಿಗೆ ಬೆಳಕು ತೋರುತ್ತಿವೆ. ಆಧುನಿಕತೆಯ ಹೆಸರಿನಲ್ಲಿ ಸಂಸ್ಕೃತಿ, ಸತ್ಯ ಪರಂಪರೆ ನಾಶಗೊಳ್ಳಬಾರದು. ದೇವರು ಧರ್ಮದಲ್ಲಿ ನಂಬಿಕೆ ಕಳೆದುಕೊಳ್ಳಬಾರದು ಎಂದರು.

ದೇವಾಪುರ ಹಿರೇಮಠದ ಶಿವಮೂರ್ತಿ ಶಿವಾಚಾರ್ಯರು, ಹೆಬ್ಬಾಳು ನಾಗಭೂಷಣ ಶಿವಾಚಾರ್ಯರು, ಸಿಂಧನೂರು ಸೋಮನಾಥ ಶಿವಾಚಾರ್ಯರು ಪಾಲ್ಗೊಂಡು ಉಪದೇಶಾಮೃತವನ್ನಿತ್ತರು. ಸಮಾರಂಭವನ್ನು ಉದ್ಘಾಟಿಸಿದ ಶ್ರೀ ಗುರು ರೇವಣಸಿದ್ಧೇಶ್ವರ ದೇವಸ್ಥಾನದ ಅಧ್ಯಕ್ಷ ನಿಂಗನಗೌಡ ಪಾಟೀಲರು ಮಾತನಾಡಿ, ಧರ್ಮದ ದಿಕ್ಸೂಚಿ ಇಲ್ಲದೇ ಜೀವನ ಉತ್ತಮವಾಗಿ ನಡೆಯಲು ಸಾಧ್ಯವಿಲ್ಲ. ನೀತಿ ಸಂಹಿತೆಯೇ ಧರ್ಮವಾಗಿದೆ. ಅರಿತು, ಆಚರಿಸಿ ಬಾಳಿದರೆ ಮನುಷ್ಯನ ಜೀವನ ಉಜ್ವಲಗೊಳ್ಳುವುದು. ಕೆಂಭಾವಿಯಲ್ಲಿ ಜರುಗಿದ ಈ ಸಮಾರಂಭ ಭಕ್ತ ಸಂಕುಲದ ಬಾಳಿಗೆ ಬೆಳಕು ತೋರಿದೆ ಎಂದರು.

ಈ ಅಪೂರ್ವ ಸಮಾರಂಭದಲ್ಲಿ ಸಗರ, ನಗನೂರು, ಮಸ್ಕಿ, ದೊಡ್ಡಸಗರ, ಸಿಂದಗಿ, ಸುಳಿಕಲ್ಲ, ಹೆಬ್ಬಾಳು, ಕರಡಕಲ್ಲ, ಚಾಮನಾಳು ಶ್ರೀಗಳು ಉಪಸ್ಥಿತರಿದ್ದರು. ಹಲವಾರು ಗಣ್ಯರು ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳವರಿಂದ ಗುರುರಕ್ಷೆ ಪಡೆದರು. ಅನಘಾ ಕುಲಕರ್ಣಿ ಇವರಿಂದ ಭರತನಾಟ್ಯ ಜರುಗಿತು. ನಿಂಗನಗೌಡ ದೇಸಾಯಿ ಪರಸನಹಳ್ಳಿ ಸ್ವಾಗತಿಸಿದರು. ಅಮರಯ್ಯಸ್ವಾಮಿ ಜಾಲಿಬೆಂಚಿ ನಿರೂಪಿಸಿದರು.

ಇದೇ ಸಂದರ್ಭದಲ್ಲಿ ಶಿಲಾ ಮಂಟಪ ಶಂಕುಸ್ಥಾಪನೆ, ಅಯ್ಯಾಚಾರ, ಶಿವದೀಕ್ಷೆ, ಲೋಕಕಲ್ಯಾಣಾರ್ಥವಾಗಿ ಹೋಮ-ಹವನ, ಪೂಜಾ ಕಾರ್ಯಗಳು ಜರುಗಿದವು. ಸಮಾರಂಭಕ್ಕೂ ಮುನ್ನ ಶ್ರೀ ರಂಭಾಪುರಿ ಜಗದ್ಗುರುಗಳವರನ್ನು ಅಲಂಕೃತ ಭವ್ಯ ಸಾರೋಟಿನಲ್ಲಿ ಮೆರವಣಗೆ ಮೂಲಕ ಬರಮಾಡಿಕೊಳ್ಳಲಾಯಿತು. ಉತ್ಸವದಲ್ಲಿ ಕುಂಭ ಕಲಶ ಹಿಡಿದ ಮುತ್ತೈದೆಯರು, ವೀರಗಾಸೆ ಪುರವಂತರು, ಭಜನಾ ಮಂಡಳಿ, ವಿವಿಧ ಕಲಾ ತಂಡಗಳು ಪಾಲ್ಗೊಂಡು ಮೆರವಣಿಗೆಗೆ ಮೆರಗು ತಂದವು. ಬಂದ ಸಕಲ ಸದ್ಭಕ್ತರಿಗೆ ಅನ್ನದಾಸೋಹ ಜರುಗಿತು.

> ದೇವರಿಗೆ ಸಹಸ್ರಾರು ಹೆಸರುಗಳಿದ್ದರೂ ಮೂಲಶಕ್ತಿ ಒಂದೇ ಆಗಿದೆ. ಅದರ ಅರಿವನ್ನು ಹೊಂದಿ ಬಾಳುವುದೇ ಸುಖ-ಶಾಂತಿಯ ಬದುಕಿಗೆ ಸಹಕಾರಿಯಾಗಲಿದೆ. ದುಷ್ಟರ ಸಂಹಾರ, ಶಿಷ್ಟರ ಸಂರಕ್ಷಣೆಗಾಗಿ ಅವತರಿಸಿದ ಜಗನ್ಮಾತೆ ಶ್ರೀ ದೇವಿ ಮತ್ತು ಶ್ರೀ ವೀರಭದ್ರೇಶ್ವರ ಮಂಗಲಮೂರ್ತಿ ಪ್ರತಿಷ್ಠಾಪಿಸಿರುವುದು ಸಂತೋಷ ತಂದಿದೆ. ಕೆಂಭಾವಿ ಹಿರೇಮಠದ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಸಮಾಜಮುಖಿಯಾಗಿ, ಧರ್ಮಮುಖಿಯಾಗಿ ಭಕ್ತರಿಗೆ ಅರಿವು ಮೂಡಿಸುತ್ತಿರುವುದು ಸಂತಸದ ವಿಚಾರ.
>
> – ಡಾ.ವೀರಸೋಮೇಶ್ವರ ಜಗದ್ಗುರುಗಳು.
> ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

# ಆಸೆಯ ನಿವೃತ್ತಿಯೇ ದೇವಿಯ ದರುಶನಕ್ಕೆ ದಾರಿ



■ವಿಜಯಸಾಕ್ಷಿ ಸುದ್ದಿ, ಗದಗ

ಆಸೆಯೇ ದುಃಖಕ್ಕೆ ಮೂಲ. ಸರ್ವ ದುಃಖಗಳಿಗೆ ಆಸೆಯೇ ಬೀಜ. ಆಸೆಯಿಂದ ಸರ್ವ ದುಃಖಗಳು ಒಂದರ ಹಿಂದೆ ಒಂದು ಬರುತ್ತವೆ. ಆಸೆಯೆಂಬುದು ರಕ್ತಬೀಜಾಸುರನಿದ್ದಂತೆ. ನಮ್ಮೊಳಗಿನ ಅತಿ ಆಸೆ ಬಿಡುವುದು ನಿಜವಾದ ರಕ್ತಬೀಜಾಸುರನ ನಾಶವೆಂದು ಪೂಜ್ಯಶ್ರೀ ಚನ್ನವೀರ ಸ್ವಾಮಿಗಳು ಹಿರೇಮಠ (ಕಡಣಿ) ನುಡಿದರು.

ಅವರು ಗದುಗಿನ ಗಂಗಾಪುರ ಪೇಟೆಯಲ್ಲಿರುವ ದುರ್ಗಾದೇವಿ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ಹಮ್ಮಿಕೊಂಡಿದ್ದ ದೇವಿ ಮಹಾತ್ಮೆ ಪುರಾಣ ಪ್ರವಚನದ 8ನೇ ದಿನದ ಪ್ರವಚನ ನೀಡಿದರು.

ಪುರಾಣ ಪಠಣವನ್ನು ಪಂಡಿತ ರೇವಣಸಿದ್ದಯ್ಯ ಹಿರೇಮಠ, ಚಿಂಚೋಳಿ ಇವರು ನಡೆಸಿಕೊಟ್ಟರು. ಪಂಡಿತ ವಿಠಲ ವಿ.ಹೂಗಾರ ತಬಲಾ ಸಾಥ್ ನೀಡಿದರು. ಇದೇ ಸಂದರ್ಭದಲ್ಲಿ ಪ್ರಸಾದ ಸೇವೆ ಮತ್ತು ಕುಂಭ ಹೊತ್ತ ಮಹಿಳೆಯರಿಗೆ ಸೀರೆ ಮತ್ತು ಫಲಪುಷ್ಪ ದಾನಿಗಳಾದ ಮಂಜುನಾಥ ಬೆಳದಡಿ ಸಹೋದರರಿಗೆ ಶ್ರೀದುರ್ಗಾ ಶ್ರೀರಕ್ಷೆ ನೀಡಿ ಗೌರವಿಸಲಾಯಿತು. ದೇವಸ್ಥಾನ ಟ್ರಸ್ಟ್ ಕಮಿಟಿ ಅಧ್ಯಕ್ಷ ಎಂ.ಎಸ್ ಪಾಟೀಲ ಕಾರ್ಯಕ್ರಮ ಕುರಿತು ಮಾತನಾಡಿದರು. ದೇವಸ್ಥಾನ ಕಮಿಟಿಯ ನಿರ್ದೇಶಕ ಮಂಡಳಿಯ ಸದಸ್ಯ ಬಸವರಾಜ ಬೆಳಧಡಿ ಉಪಸ್ಥಿತರಿದ್ದರು. ಪುರಾಣ ಪ್ರವಚನದ ನಂತರ ಬೆಳಧಡಿ ಸಹೋದರಿಂದ ದಾಸೋಹ ನಡೆಯಿತು.

# 'ವ್ಯೂಹ' ಚಿತ್ರದ'ಪದೆ ಪದೆ ನೆನಪಾಗಿದೆ' ಹಾಡು ಬಿಡುಗಡೆ



■ವಿಜಯಸಾಕ್ಷಿ ಸುದ್ದಿ, ಬೆಳಗಾವಿ

ಎಸ್‌ಡಿಫಿಲ್ಮ್ಸ್ ಮತ್ತು ಮೂರು ಬಿಟ್ಟವರು ಎಂಟರ್ಟೈನ್ಮೆಂಟ್ ಬ್ಯಾನರನ ಅಡಿಯಲ್ಲಿ ನಿರ್ಮಾಣವಾಗಿರುವ ಅಪ್ಪಟ ಉತ್ತರಕರ್ನಾಟಕದ ಪ್ರತಿಭೆಗಳೇ ಸೇರಿ ಮಾಡಿರು ವಂತಹ "ವ್ಯೂಹ" ಕನ್ನಡ ಚಲನಚಿತ್ರದ 'ಪದೆ ಪದೆ ನೆನಪಾಗಿದೆ, ಅದೇಕಥೆ ನೆನೆದು' ಮೊದಲ ಲಿರಿಕಲ್ ಹಾಡು ಮಾಸ್ ಮ್ಯೂಸಿಕ್ ಅಡ್ಡಾ ಯ್ಯೂಟ್ಯೂಬ್ ಚಾನೆಲ್‌ನಲ್ಲಿ ಬಿಡುಗಡೆ ಮಾಡಲಾಯಿತು.

ಕೋವಿಡ್ ಸಂದರ್ಭದಲ್ಲಿ ನಡೆದ ಒಂದು ಸಸ್ಪೆನ್ಸ್ ಥ್ರಿಲ್ಲರ್ ಡ್ರಾಮಾಯನ್ನು ಇದು ಆಧರಿಸಿದ್ದು, ಯಾರು ಒಳ್ಳೆಯವರು ಅಲ್ಲಾ; ಹಾಗೇ ಕೆಟ್ಟವರುಅಲ್ಲಾ, ಮನುಷ್ಯನ ಪರಿಸ್ಥಿತಿ ಆತನನ್ನು ಕೆಟ್ಟವನು ಒಳ್ಳೆಯವನಾಗಿ ಮಾಡುತ್ತೆ ಎನ್ನುವುದೇ ಚಿತ್ರದೊಳಗೆ ಅಡಗಿರುವ ಕಥಾ ಸಾರಂಶ. ಬೆಳಗಾವಿ ಸುತ್ತಮುತ್ತ ಚಿತ್ರೀಕರಣ ನಡೆಸಲಾದ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಸೂರಜ್ ದೇಸಾಯಿ, ಪ್ರವೀಣ ಸುತಾರ, ದೀಪಶ್ರೀ ಗೌಡ, ಮಾನಸಿ ಶಿವನಗೇಕರ್, ಮಹೇಶ ಪಾಟೀಲ್, ಅಭಿಜಿತ ದೇಶಪಾಂಡೆ, ಶಾಂತಾಆಚಾರ್ಯ, ಕಿರಣ್, ಮುಂತಾದವರು ನಟ- ನಟಿಯರು ಅಭಿನಯಿಸಿದ್ದಾರೆ.

ವಿಶ್ವರಾಧ್ಯ ಕೋಟಿ ಛಾಯಾ ಗ್ರಹಣ, ಚಿತ್ರದ ಒನಲೈನ್ ಕಥೆಯನ್ನು ಸೂರಜ್ ದೇಸಾಯಿ ಬರೆದಿದ್ದಾರೆ. ಚಿತ್ರಕಥೆ, ಸಂಭಾಷಣೆಯನ್ನು ಪ್ರವೀಣ ಸುತಾರ, ಮಹೇಶ ಪಾಟೀಲ, ಅಭಿಷೇಕ್ ದೇಸಾಯಿ ಬರೆದಿದ್ದಾರೆ. ಈಗಾಗಲೇ ಅನಾಮಿಕ, ಒಂದೊಳ್ಳೆ ಲವ್ ಸ್ಟೋರಿ ಚಿತ್ರಗಳನ್ನು ನಿರ್ದೇಶಿಸಿ ಗುರುತಿಸಿ ಕೊಂಡ ಪ್ರವೀಣ ಸುತಾರ ಚಿತ್ರವನ್ನುಅಚ್ಚು ಕಟ್ಟಾಗಿ ನಿರ್ದೇಶನ ಮಾಡಿದ್ದಾರೆ. ಫ್ರಾಂಕ್ಲೀನ್ ರಾಕಿ ಸಂಗಿತ ನಿರ್ದೇಶನ, ಪ್ರಶಾಂತ ಶೇಬನ್ನವರ ಸಂಕಲನ, ಡಾ. ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿಅವರ ಪತ್ರಿಕಾ ಸಂಪರ್ಕ ಚಿತ್ರಕ್ಕೆ ಇದೆ. ಸಧ್ಯದಲ್ಲೇಚಿತ್ರ ಬಿಡುಗಡೆಗೊಳಿಸುವದಾಗಿ ನಿರ್ದೇಶಕ ಪ್ರವೀಣ ಸುತಾರ ತಿಳಿಸಿದ್ದಾರೆ.

# ಮಾಂಸಕ್ಕಾಗಿ ನವಿಲುಗಳನ್ನು ಕೊಂದ ಆರೋಪ: ಮೂವರ ಬಂಧನ

■ವಿಜಯಸಾಕ್ಷಿ ಸುದ್ದಿ, ತುಮಕೂರು

ಜಿಲ್ಲೆಯ ಮಾರನಾಯಕನಪಾಳ್ಯ ಗ್ರಾಮದಲ್ಲಿ ಮಾಂಸಕ್ಕಾಗಿ ನವಿಲುಗಳನ್ನು ಕೊಂದ ಆರೋಪದ ಮೇಲೆ ಒಡಿಶಾ ಮೂಲದ ಮೂವರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಗುರುವಾರ ಬಂಧಿಸಿದ್ದಾರೆ. ಬಂಧಿತರನ್ನು ಬಿಟ್ಟಿಂಗ್ ನಾಯಕ್, ಬೈಶಕ್ ದಾವು ಮತ್ತು ದುಬಾ ಕಪಟ್ ಎಂದು ಗುರುತಿಸಲಾಗಿದೆ. ಅಧಿಕಾರಿಗಳ ಪ್ರಕಾರ, ಆರೋಪಿಗಳು ಮಾರನಾಯಕನಪಾಳ್ಯದ ಇಟ್ಟಿಗೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು ಮತ್ತು 'ಗಟ್ಟಿಮುಟ್ಟಾದ ಮತ್ತು ರುಚಿಕರ' ಮಾಂಸಕ್ಕಾಗಿ ನವಿಲುಗಳನ್ನು ಕೊಂದಿದ್ದಾರೆ ಎನ್ನಲಾಗಿದೆ.

# ಶೈಲಿ, ತಂತ್ರಗಳೇ ಸಣ್ಣ ಕಥೆಗಳ ಜೀವಾಳ



■ವಿಜಯಸಾಕ್ಷಿ ಸುದ್ದಿ, ಧಾರವಾಡ

ಆದದ್ದನ್ನು ಬರೆಯುವುದಕ್ಕಿಂತ ಆಗಬಹುದಾದದ್ದನ್ನು ಬರೆಯಬೇಕು. ಸಂಭವನೀಯತೆಯ ಅಭಿವ್ಯಕ್ತಿ ಮಹತ್ವದ್ದು ಎಂದು ಡಾ. ಹೇಮಾ ಪಟ್ಟಣಶೆಟ್ಟಿ ಅಭಿಪ್ರಾಯಪಟ್ಟರು.

ಇತ್ತೀಚೆಗೆ ಧಾರವಾಡದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಭವನದಲ್ಲಿ ಪುಷ್ಪಾ ಹಾಲಭಾವಿ ಅವರ 'ಗರ್ಭಗುಡಿ ಬಾಡಿಗೆಗೆ' ಎಂಬ ಕಥಾ ಸಂಕಲನವನ್ನು ಬಿಡುಗಡೆ ಮಾಡಿ ಅವರು ಮಾತನಾಡುತ್ತಿದ್ದರು.

ಶೈಲಿ ಹಾಗೂ ತಂತ್ರಗಳೇ ಸಣ್ಣ ಕಥೆಗಳ ಜೀವಾಳ. ತಂತ್ರಗಳನ್ನು ಬಳಸಿಕೊಂಡು ಗ್ರಹಿಕೆಯ ನೆಲೆಗಳನ್ನು ವಿಸ್ತರಿಸಿಕೊಳ್ಳಬೇಕು. ನಿರಂತರವಾದ ಪ್ರಯತ್ನ ಹಾಗೂ ಪರಿಷ್ಕರಣೆ ಅತ್ಯವಶ್ಯ ಎಂದು ಉದಯೋನ್ಮುಖ ಕಥೆಗಾರರಿಗೆ ಕಿವಿ ಮಾತನ್ನು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಡಾ. ರಾಜೇಶ್ವರಿ ಮಹೇಶ್ವರಯ್ಯ ಅವರು, ಕೃತಿಯು ಸಮಕಾಲೀನ ಸಮಸ್ಯೆಗಳ ಅಭಿವ್ಯಕ್ತಿಯಾಗಿದ್ದು, ಇದರ ಮೂಲ ನೆಲೆ ಕುಟುಂಬವೇ ಆಗಿದೆ. ಈಗ ಸಂಬಂಧಗಳು ದೂರವಾಗುತ್ತಿರುವ ದಿನಮಾನಗಳಲ್ಲಿ ಈ ಕಥೆಗಳನ್ನು ಓದಿ ಆನಂದ ಪಡುವಂತೆ ಆಗಿದೆ ಎಂದರು. ಅಧ್ಯಕ್ಷತೆ ವಹಿಸಿದ ಖ್ಯಾತ ಸಾಹಿತಿ ದುಶ್ಯಂತ ನಾಡಗೌಡ ಮಾತನಾಡಿ, ಸಾಹಿತ್ಯ ವಾಸ್ತವದ ಘಟನೆಗಳ ಮೇಲೆ ಸಂಭಾವ್ಯತೆಗಳನ್ನು ಕಟ್ಟಿಕೊಡುತ್ತದೆ. ಅತೃಪ್ತಿಯೇ ಕವನ ಕಥೆಗಳಿಗೆ ಮೂಲ ಕಾರಣ ಎಂದು ಹೇಳಿದರು. ಲೇಖಕಿ ಪುಷ್ಪಾ ಹಾಲಭಾವಿಯವರು ತಮ್ಮ ಬದುಕಿನ ಏರಿಳಿತಗಳಿಂದ ಹೊರಬರಲು ಕಂಡುಕೊಂಡ ಸಾಹಿತ್ಯಿಕ ಊರುಗೋಲು ಈ ಸಂಕಲನ ಹೊರ ಬರಲು ಮೂಲ ಪ್ರೇರಣೆ ಎಂದು ಸ್ಮರಿಸಿಕೊಂಡರು.

ಉಷಾ ಕುಲಕರ್ಣಿ ಕಾರ್ಯಕ್ರಮ ನಿರೂಪಿಸಿದರು. ಮೇಘಾ ಹುಕ್ಕೇರಿ ಪ್ರಾರ್ಥನೆ ಸಲ್ಲಿಸಿದರು. ಬಸವಂತಿ ಇಂಗಳಳ್ಳಿ ಸ್ವಾಗತಿಸಿದರು. ಸುನಿತಾ ಮೂರಶಿಳ್ಳಿ, ಪ್ರತಿಭಾ ಪಾಟೀಲ, ಸುವರ್ಣಾ ತಾಂಡೂರ ಪರಿಚಯಿಸಿದರು. ಕಾರ್ಯಕ್ರಮದಲ್ಲಿ ಸಾಹಿತ್ಯಾಸಕ್ತರು, ಹಾಲಭಾವಿ ಕುಟಂಬದವರು, ಅಭಿಮಾನಿಗಳು ಉಪಸ್ಥಿತರಿದ್ದರು.

# ಚನ್ನಮ್ಮಳ ದೇಶಾಭಿಮಾನ ನಮಗೆ ಪ್ರೇರಣೆಯಾಗಲಿ



■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಸ್ವಾತಂತ್ರ್ಯ ಪಡೆಯಲು ಬ್ರಿಟಿಷರ ವಿರುದ್ಧ ಹೋರಾಟ ನಡೆಸಿ, ಜಗತ್ತೇ ನಿಬ್ಬೆರಗಾಗಿ ನೋಡವಂತೆ ಮಾಡಿದ್ದು ವೀರರಾಣಿ ಕಿತ್ತೂರ ಚನ್ನಮ್ಮ ಎಂದು ಪುರಸಭೆ ಸ್ಥಾಯಿ ಸಮಿತಿ ಚೇರಮನ್ ಕನಕಪ್ಪ ಅರಳಿಗಿಡದ ಹೇಳಿದರು.

ವೀರರಾಣಿ ಕಿತ್ತೂರ ಚನ್ನಮ್ಮ ಜಯಂತಿಯಂದು ಇಲ್ಲಿನ ಬಿಜೆಪಿ ಕಾರ್ಯಾಲಯದಲ್ಲಿ ಕಿತ್ತೂರ ಚನ್ನಮ್ಮ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಬ್ರಿಟಿಷರು ದೇಶದ ಮೂಲ ನಿವಾಸಿಗಳನ್ನು ಗುಲಾಮಗಿರಿ ಪದ್ಧತಿಯಲ್ಲಿ ಜೀವನ ಸಾಗಿಸುವ ದುಸ್ಥಿತಿ ತಂದಿಟ್ಟರು. ಹೀಗಾಗಿ ಬ್ರಿಟಿಷರನ್ನು ದೇಶದಿಂದ ಹೊಡೆದೋಡಿಸಲು ಕಿತ್ತೂರ ರಾಣಿ ಚನ್ನಮ್ಮ ದೇಶದ ರಕ್ಷಣೆಗಾಗಿ ದಿಟ್ಟತನದಿಂದ ಹೋರಾಡಿದ್ದರು. ಅವರ ದೇಶಾಭಿಮಾನ ನಮಗೆ ಪ್ರೇರಣೆಯಾಗಬೇಕಿದೆ ಎಂದರು.

ಪುರಸಭೆ ಸದಸ್ಯರಾದ ಸುಭಾಸ ಮ್ಯಾಗೇರಿ, ಮುದಿಯಪ್ಪ ಮುಧೋಳ, ರಾಂಪೂರ ಗ್ರಾ.ಪಂ ಸದಸ್ಯ ಬಾಳಾಜೀರಾವ್ ಭೋಸಲೆ, ರಾಜೇಂದ್ರ ಘೋರ್ಪಡೆ, ದುರಗಪ್ಪ ಮುಧೋಳ, ಉಮೇಶ ಚನ್ನುಪಾಟೀಲ, ಸಿದ್ದಣ್ಣ ಚೋಳಿನ, ಶಿವಾನಂದ ಮಠದ, ಸುಗೂರೇಶ ಚೊಳಿನ ಸೇರಿ ಇತರರು ಇದ್ದರು.

ಪಟ್ಟಣದ ಪುರಸಭೆಯಲ್ಲಿ ಪಂಚಮಸಾಲಿ ಸಮಾಜದಿಂದ ಕಿತ್ತೂರ ಚನ್ನಮ್ಮ ಜಯಂತಿ ಹಾಗೂ ವಿಜಯೋತ್ಸವದ ನಿಮಿತ್ತ ಚನ್ನಮ್ಮ ಭಾವಚಿತ್ರಕ್ಕೆ ಗಜೇಂದ್ರಗಡ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಸಿದ್ದಣ್ಣ ಬಂಡಿ ಪುಷ್ಪಾರ್ಚನೆ ಸಲ್ಲಿಸಿದರು. ಪುರಸಭೆ ಸ್ಥಾಯಿ ಸಮಿತಿ ಚೇರಮನ್ ಕನಕಪ್ಪ ಅರಳಿಗಿಡದ, ಸದಸ್ಯರಾದ ರಾಜು ಸಾಂಗ್ಲೀಕರ, ಮುದಿಯಪ್ಪ ಮುಧೋಳ ಹಾಗೂ ಸಿದ್ದಣ್ಣ ಚೋಳಿನ, ದುರಗಪ್ಪ ಮುಧೋಳ, ಟಿ.ಎಸ್ ರಾಜೂರ ಸೇರಿದಂತೆ ಸಮಾಜದ ಮುಖಂಡರು ಹಾಗೂ ಅಧಿಕಾರಿಗಳು ಇದ್ದರು.

## ಕೋಚಲಾಪುರದ ಸಮಾರಂಭದಲ್ಲಿ ಶ್ರೀ ಗಂಗಾಧರ ಮಹಾಸ್ವಾಮಿಗಳು

# ಸಾಮೂಹಿಕ ವಿವಾಹ ಅತ್ಯಂತ ಶ್ರೇಷ್ಠ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಾಮೂಹಿಕ ವಿವಾಹಗಳು ಕೇವಲ ಬಡವರಿಗಾಗಿ ಎಂಬ ವಿಚಾರವನ್ನು ಎಲ್ಲರೂ ತೊರೆಯಬೇಕು. ಸ್ವಾಮೀಜಿಗಳು, ದೈವದವರೆಲ್ಲರೂ ಸೇರಿ ಮಾಡುವ ಸಾಮೂಹಿಕ ವಿವಾಹ ಅತ್ಯಂತ ಶ್ರೇಷ್ಠವಾದುದು. ಪುಣ್ಯವಂತರಿಗೆ ಮಾತ್ರ ಸಾಮೂಹಿಕ ವಿವಾಹ ಸಮಾರಂಭಗಳಲ್ಲಿ ಮದುವೆಯಾಗುವ ಯೋಗ ಇರುತ್ತದೆ ಎಂದು ಕೊತಬಾಳದ ಅಂಕಲಿ ಮಠದ ಶ್ರೀ ಗಂಗಾಧರ ಮಹಾಸ್ವಾಮಿಗಳು ಹೇಳಿದರು. ಸಮೀಪದ ಕೋಚಲಾಪುರದ ಶ್ರೀ ದೇವಿ ಪುರಾಣ ಸಮಿತಿಯವರು ಏರ್ಪಡಿಸಿದ್ದ ಸಾಮೂಹಿಕ ವಿವಾಹ ಸಮಾರಂಭದ ನೇತೃತ್ವವನ್ನು ವಹಿಸಿ ಅವರು ಆಶೀರ್ವಚನ ನೀಡಿದರು.

ಸಮಾರಂಭವನ್ನು ರೋಣ ಪುರಸಭೆಯ ಉಪಾಧ್ಯಕ್ಷ ಮಿಥುನ್ ಜಿ.ಪಾಟೀಲ ಉದ್ಘಾಟಿಸಿ ಮಾತನಾಡಿ, ಈ ಸಾಮೂಹಿಕ ವಿವಾಹದಲ್ಲಿ ಪಾಲ್ಗೊಂಡು ನಿಮ್ಮ ಪುಣ್ಯವನ್ನು ಹೆಚ್ಚಿಸಿಕೊಂಡಿದ್ದೀರಿ. ಇಲ್ಲಿನವರ ಭಾವೈಕ್ಯತೆ ಎಲ್ಲರಿಗೂ ಮಾದರಿ ಎಂದರು.

ವೇದಿಕೆಯ ಮೇಲೆ ಡಾ. ಆರ್.ಕೆ ಗಚ್ಚಿನಮಠ, ವಿ.ಕೆ ರಡ್ಡೇರ, ತಾಲೂಕಾ ಬಿಜೆಪಿ ಅಧ್ಯಕ್ಷ ಮುತ್ತಣ್ಣ ಕಡಗದ, ನರೇಗಲ್ಲ ಶಹರ ಕಾಂಗ್ರೆಸ್ ಅಧ್ಯಕ್ಷ ಶಿವನಗೌಡ ಪಾಟೀಲ, ಬನಶಂಕರಿ ಸೇವಾ ಟ್ರಸ್ಟ್ ಕಮಿಟಿ ಅಧ್ಯಕ್ಷ ಶಿವಕುಮಾರ ವೀರನಗೌಡ್ರ, ಬಸವೇಶ್ವರ ಸೇವಾ ಟ್ರಸ್ಟ್ ಕಮೀಟಿ ಅಧ್ಯಕ್ಷ ವಿರುಪಾಕ್ಷಯ್ಯ ಮೇಟಿಮಠ, ಅಂಜುಮನ್ ಇಸ್ಲಾಂ ಕಮಿಟಿ ಅಧ್ಯಕ್ಷ ಬಾಬುಸಾಬ ನರಗುಂದ, ಡಾ. ಲಿಂಗಯ್ಯ ಗೌರಿ, ಅಲ್ಲಾಭಕ್ಷಿ ನದಾಫ್, ಅಶೋಕಕುಮಾರಗೌಡ ವೀರನಗೌಡ್ರ ಮುಂಚಿತಾದವರಿದ್ದರು.

ನರೇಗಲ್ಲ ಶಹರ ಬಿಜೆಪಿ ಅಧ್ಯಕ್ಷ ಉಮೇಶ ಸಂಗನಾಳಮಠ, ಅಧ್ಯಕ್ಷತೆ ವಹಿಸಿದ್ದ ಗದಗ ಜಿಲ್ಲಾ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಗೂಳಯ್ಯ ಮಾಲಗಿತ್ತಿಮಠ ಮಾತನಾಡಿದರು. ಜನಪದ ಕಲಾವಿದ ಗವಿಸಿದ್ದಯ್ಯ ಹಳ್ಳಿಕೇರಿಮಠ ಜಾನಪದ ಸಂಗೀತ ನಡೆಸಿಕೊಟ್ಟರು. ನಿಡಗುಂದಿಕೊಪ್ಪದ ಶ್ರೀ ಚನ್ನಬಸವ ಸ್ವಾಮೀಜಿ, ನರೇಗಲ್ಲ ಹಿರೇಮಠದ ಷ.ಬ್ರ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಆಶೀರ್ವಚನ ನೀಡಿದರು. ನರೇಗಲ್ಲ ದರಗಾದ ಅಜ್ಜನವರಾದ ಹಜರತ್ ಸಯ್ಯದ ಮಂಜೂರ ಹುಸೇನ್‌ಶ್ಯಾವಲಿಯವರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಅಂದಾನಯ್ಯ ಹಾಲಕೇರಿಮಠ ನಿರೂಪಿಸಿದರು. ರಾಚಯ್ಯ ಮಾಲಗಿತ್ತಿಮಠ ಸ್ವಾಗತಿಸಿದರು.

> ದಿವ್ಯ ಸಾನ್ನಿಧ್ಯ ವಹಿಸಿದ್ದ ರೋಣ ಗುಲಗಂಜಿ ಮಠದ ಶ್ರೀ ಗುರುಪಾದ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಇಲ್ಲಿ ನಡೆಯುವ ದಾಸೋಹ ಸೇವೆ ಮತ್ತು ಸಾಮೂಹಿಕ ವಿವಾಹಗಳಿಗೆ ದೇಣಿಗೆ ನಿಡುವುದರಿಂದ ಮನಸ್ಸು ಪ್ರಫುಲ್ಲಿತವಾಗುತ್ತದೆ. ಇದರಿಂದ ಪರಸ್ಪರರಲ್ಲಿನ ವೈಷಮ್ಯಗಳು ದೂರಾಗಿ ನಾವೆಲ್ಲರೂ ಒಂದು ಎಂಬ ಭಾವನೆ ಬರುತ್ತದೆ ಎಂದರು.

# ನ. 5ರಂದು ಚಿಕ್ಕಮಗಳೂರಿನಲ್ಲಿ ಶೋಭಾಯಾತ್ರೆ, ಧರ್ಮಸಭೆ

▶▶ಮೊದಲನೇ ಪುಟದಿಂದ

ಹಸಿರುಧ್ವಜ ತೆರವುಗೊಂಡಿವೆ. ನಮಾಜ್ ಹಾಗೂ ಮೈಕ್ ಸ್ಥಗಿತಗೊಂಡಿದೆ. ಹಿಂದೂ ಧಾರ್ಮಿಕ ಆಚರಣೆಯ ಅನ್ವಯ ಅರ್ಚಕರ ನೇಮಕವಾಗಿ, ಹಿಂದೂ ಧಾರ್ಮಿಕ ವಿಧಿ-ವಿಧಾನಗಳ ಪೂಜೆ, ಪುನಸ್ಕಾರ ಆಚರಣೆಗಳು ಆರಂಭವಾಗಿದೆ ಎಂದು ರಾಜು ಖಾನಪ್ಪನವರ್ ತಿಳಿಸಿದರು.

ಇದೇ ಅ.30ರಂದು ದತ್ತಮಾಲೆ ಧಾರಣೆ ಕಾರ್ಯಕ್ರಮದ ಮೂಲಕ ಅಭಿಯಾನ ಆರಂಭವಾಗಲಿದೆ. ನ. 2ರಂದು ದತ್ತ ದೀಪೋತ್ಸವ, ನ. 4ರಂದು ಪಡಿ ಸಂಗ್ರಹ ನಡೆಯಲಿದೆ. ನ.5ರಂದು ಚಿಕ್ಕಮಗಳೂರಲ್ಲಿ ನಡೆಯುವ ಶೋಭಾಯಾತ್ರೆ, ಧರ್ಮಸಭೆ, ದತ್ತಾಪೀಠದಲ್ಲಿ ಪಾದುಕೆ ದರ್ಶನ, ಹೋಮ, ಹವನ ಹಾಗೂ ಮಹಾಪ್ರಸಾದ ಸೇವೆ ನಡೆಯಲಿದೆ ಎಂದು ರಾಜು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನಮ್ಮ ಜಿಲ್ಲೆಯಿಂದಲೂ ಈ ಬಾರಿಯ ದತ್ತಮಾಲಾ ಅಭಿಯಾನದಲ್ಲಿ ನೂರಾರು ದತ್ತಾಭಕ್ತರು ಭಾಗಿಯಾಗಿಲಿದ್ದಾರೆ ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೇನೆಯ ರಾಜ್ಯ ಶಾರೀರಿಕ ಪ್ರಮುಖ ಮಹೇಶ ರೋಖಡೆ, ಜಿಲ್ಲಾ ಘಟಕದ ಗೌರವ ಅಧ್ಯಕ್ಷ ಮುತ್ತಣ್ಣ ಪವಾಡ ಶೆಟ್ಟರ, ಜಿಲ್ಲಾ ಘಟಕದ ಅಧ್ಯಕ್ಷ ಸೋಮು ಗುಡಿ, ಉಪಾಧ್ಯಕ್ಷ ಬಸವರಾಜ ಕುರ್ತಕೋಟಿ, ಶಹರ ಅಧ್ಯಕ್ಷ ಅಶೋಕ ಭಜಂತ್ರಿ, ಭರತ್ ಲದ್ದಿ, ಸತೀಶ್ ಕುಂಬಾರ, ವೆಂಕಟೇಶ್ ದೊಡ್ಡಮನಿ, ಬಸವರಾಜ್ ಬನ್ನಿಮರದ ಉಪಸ್ಥಿತರಿದ್ದರು.

# 'ಹೆಸರಾಗಲಿ ಕನ್ನಡ, ಉಸಿರಾಗಲಿ ಕರ್ನಾಟಕ'

▶▶ಮೊದಲನೇ ಪುಟದಿಂದ

ಎಂದರು. ನವೆಂಬರ್ 1ರಿಂದ 3ರವರೆಗೆ ಪ್ರತಿ ದಿನ ಸಂಜೆ ಕಾಟನ್ ಸೇಲ್ ಸೊಸೈಟಿ ಆವರಣದ ಬೃಹತ್ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ನವೆಂಬರ್ 1ರಂದು ಸ್ಥಳೀಯ ಕಲಾವಿದರಿಂದ, ನವೆಂಬರ್ 2 ಮತ್ತು 3ರಂದು ಸ್ಥಳೀಯ ಹಾಗೂ ರಾಜ್ಯ ಮಟ್ಟದ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಮೂಡಿಬರಲಿವೆ.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ವಾರ್ತಾಧಿಕಾರಿ ವಸಂತ ಮಡ್ಲೂರ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಸೇರಿದಂತೆ ವಿವಿಧ ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು, ಅಭಿಮಾನಿಗಳು, ಸಾರ್ವಜನಿಕರು ಹಾಜರಿದ್ದರು.

# ದೋಷರಹಿತ, ಪಾರದರ್ಶಕ ಪರೀಕ್ಷೆ ನಡೆಯಲು ಕಟ್ಟೆಚ್ಚರ ವಹಿಸಿ

▶▶ಮೊದಲನೇ ಪುಟದಿಂದ

ಕಾರ್ಮಿಕರ ಕಲ್ಯಾಣ ಮಂಡಳಿ, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಮಂಡಳಿ ಹಾಗೂ ಪ್ರಾಧಿಕಾರಗಳಲ್ಲಿ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕರ ಹಾಗೂ ಕಿರಿಯ ಸಹಾಯಕರ ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಿದೆ.

ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಉಪವಿಭಾಗಾಧಿಕಾರಿ ಡಾ.ವೆಂಕಟೇಶನಾಯ್ಕ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಾರುತಿ ಬ್ಯಾಕೋಡ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾಅಧಿಕಾರಿ ರವಿ ಗುಂಜಿಕರ, ಜಿಲ್ಲಾ ಸಾಂಖ್ಯಾ ಸಂಗ್ರಹಣಾಧಿಕಾರಿ ಕಂಬಾಳಿಮಠ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಪರೀಕ್ಷಾ ಕೇಂದ್ರಗಳ ಪ್ರಾಂಶುಪಾಲರು, ನೋಡೆಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

# ಜಿಲ್ಲಾ ಮಟ್ಟದ ಸಮ್ಮೇಳನಕ್ಕೆ ಪೂರಕ ವಾತಾವರಣ ನಿರ್ಮಿಸಿ



■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಗಜೇಂದ್ರಗಡ ಪಟ್ಟಣದಲ್ಲಿ ಕಸಾಪ ಜಿಲ್ಲಾ ಮಟ್ಟದ ಸಮ್ಮೇಳನವನ್ನು ನಡೆಸಲು ಉದ್ದೇಶಸಲಾಗಿದ್ದು, ಜಿಲ್ಲಾ ಸಮ್ಮೇಳನ ನಡೆಸಲು ಪೂರಕವಾದ ವಾತಾವರಣ ನಿರ್ಮಿಸಲು ತಾಲೂಕಾ ಘಟಕವು ಸಾಹಿತ್ತಿಕ ಚಟುವಟಿಕೆಗಳನ್ನು ನಡೆಸಲು ಮುಂದಾಗಿ ಎಂದು ಕಸಾಪ ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ ಹೇಳಿದರು.

ಕಸಾಪ ಜಿಲ್ಲಾ ಮಟ್ಟದ ಸಮ್ಮೇಳನ ಗಜೇಂದ್ರಗಡದಲ್ಲಿ ನಡೆಸುವ ಹಿನ್ನೆಲೆಯಲ್ಲಿ ಇಲ್ಲಿನ ಗವಿಮಠದಲ್ಲಿ ನಡೆದ ತಾಲೂಕು ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಅವರು ಮಾತನಾಡಿದರು.

ಕೆಲ ದಿನಗಳಲ್ಲಿ ಕನ್ನಡ ರಾಜ್ಯೋತ್ಸವ ಆಗಮಿಸಲಿದೆ. ವಾರದ ಚಿಂತನಾ ಗೋಷ್ಠಿಗಳು ಸೇರಿ ಇನ್ನಿತರ ಸಾಹಿತ್ತಿಕ ಕಾರ್ಯಕ್ರಮಗಳನ್ನು ತಾಲೂಕಾ ಘಟಕದಿಂದ ನಿರಂತರವಾಗಿ ನಡೆಯಬೇಕಿದ್ದವು. ಆದರೆ ನಿರೀಕ್ಷಿತ ಪ್ರಮಾಣದಲ್ಲಿ ಸಾಹಿತ್ತಿಕ ಕಾರ್ಯಕ್ರಮಗಳು ನಡೆಯದ್ದರಿಂದ ತಾಲೂಕಿನಲ್ಲಿ ಸಾಹಿತ್ತಿಕ ವಾತಾವರಣ ನಿರ್ಮಾಣ ಸಾಧ್ಯವಾಗುತ್ತಿಲ್ಲ. ಹೀಗಾಗಿ ತಾಲೂಕಿನಲ್ಲಿ ಕಸಾಪದಿಂದ ಶಾಲೆ, ಕಾಲೇಜು, ಮನೆ-ಮನಗಳಲ್ಲಿ ಸಾಹಿತ್ತಿಕ ಕಾರ್ಯಕ್ರಮಗಳನ್ನು ನಡೆಸಬೇಕಿದೆ. ಅಂದಾಗ ಮಾತ್ರ ಪಟ್ಟಣದಲ್ಲಿ ಜಿಲ್ಲಾ ಮಟ್ಟದ 10ನೇ ಕನ್ನಡ ಸಾಹಿತ್ಯ ಸಮ್ಮೇಳನವು ಯಶಸ್ವಿಯಾಗಲು ಸಹಕಾರಿಯಾಗಲಿದೆ ಎಂದರು.

ಕಸಾಪ ತಾಲೂಕಾಧ್ಯಕ್ಷ ಎ.ಪಿ ಗಾಣಿಗೇರ, ರೋಣ ಕಸಾಪ ತಾಲೂಕಾಧ್ಯಕ್ಷ ರಮಾಕಾಂತ್ ಕಮತಗಿ, ಶಿವಾನಂದ ಗಿಡ್ನಂದಿ, ಬಸವರಾಜ ನೆಲಜೇರಿ, ಅಶೋಕ ಹಾದಿ, ಶಶಿಕಾಂತ ಕೋರ್ಲಹಳ್ಳಿ, ಟಿ.ಎಸ್ ಗೊರವರ, ಪುಂಡಲಿಂಕ ಕಲ್ಲಿಗನೂರ, ಬಿ.ಎ ಕೆಂಚರೆಡ್ಡಿ, ಎಸ್.ಆರ್ ಇಟಗಿ, ಬಿ.ಟಿ ಹೊಸಮನಿ, ಎ.ಎಸ್ ಕವಡಿಮಟ್ಟಿ ಇದ್ದರು.

# ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆ

■ವಿಜಯಸಾಕ್ಷಿ ಸುದ್ದಿ, ಗದಗ

ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಹಿನ್ನೆಲೆಯಲ್ಲಿ ಯಾವುದೇ ಅರ್ಹ ವಯಸ್ಸಿನ ಮಗು ಶಿಕ್ಷಣದಿಂದ ವಂಚಿತವಾಗಬಾರದು.ಎಲ್ಲಾ ಮಕ್ಕಳನ್ನು ಶಿಕ್ಷಣ ವ್ಯಾಪ್ತಿಯಲ್ಲಿರುವಂತೆ ಮಾಡಲು ಇಲಾಖೆ ಹಲವು ಯೋಜನೆಗಳನ್ನು ಜಾರಿ ಮಾಡಿದ್ದರೂ ಸಹ, ಹಲವು ಕಾರಣಗಳಿಂದಾಗಿ, ಕೆಲ ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಿದ್ದಾರೆ. ಹೀಗಾಗಿ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಿಕ್ಷಣದ ಮುಖ್ಯವಾಹಿನಿಗೆ ತರುವ ಹಿನ್ನೆಲೆಯಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ. ಪ್ರತಿ ಶಾಲೆಯ ಮುಖ್ಯಶಿಕ್ಷಕರು ಮತ್ತು ಸಹಶಿಕ್ಷಕರು ತಮ್ಮ ವ್ಯಾಪ್ತಿಗೊಳಪಡುವ ಪ್ರದೇಶಗಳಲ್ಲಿ ಶಾಲೆಗೆ ಸೇರಿ ಬಿಟ್ಟಿರುವ ಮಕ್ಕಳು ಹಾಗೂ ಶಾಲೆಗೆ ದಾಖಲಾಗದೇಇರುವ ಮಕ್ಕಳ ಮಾಹಿತಿಯನ್ನು ಪಡೆಯಲುರಾಜ್ಯ, ಜಿಲ್ಲಾ, ಬ್ಲಾಕ್, ಕ್ಲಸ್ಟರ್ ಹಾಗೂ ಶಾಲಾ ಹಂತದಲ್ಲಿಇದೇ.ಅ. 26ರಿಂದ ನ. 18ರವರೆಗೆ ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷಾ ಕಾರ್ಯವನ್ನುಕೈಗೊಂಡಿದೆ.

ಜಿಲ್ಲೆಯಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಬಿಆರ್‌ಪಿ, ಸಿಆರ್‌ಪಿ ಹಾಗೂ ಮುಖ್ಯೋಪಾಧ್ಯಾಯರು, ಸಹಶಿಕ್ಷಕರು ಹಾಗೂ ಬಿಆಯ್‌ಇಆರ್‌ಟಿಗಳು ಸೇರಿದಂತೆ ಸಮುದಾಯದ ಸಹಭಾಗಿತ್ವವನ್ನು ಉಪಯೋಗಿಸಿಕೊಂಡು ಸ ಮೀ ಕ್ಷೆ ಕಾ ರ್ಯ ವ ನ್ನು ಯಶಸ್ವಿಗೊಳಿಸುವಂತೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕಕಚೇರಿ ಪ್ರಕಟಣೆ ತಿಳಿಸಿದೆ.

### ಅರೆಬರೆ ಸ್ಥಿತಿಯಲ್ಲಿರುವ ಹೊನ್ನಾಳಿ-ಗದಗ ರಾಜ್ಯ ಹೆದ್ದಾರಿ ಸೃಷ್ಟಿಸುತ್ತಿದೆ ಧೂಳಿನ ಅವಾಂತರ

# ಪ್ರಾಣವಾಯುವೇ ಕಂಟಕವಾಗುವ ಭೀತಿ!



■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಈ ಊರಿನ ರಸ್ತೆ ಮಾರ್ಗದಲ್ಲಿ ಹಗಲಿರಳೆನ್ನದೇ ನಿತ್ಯವೂ ಸಂಚರಿಸುವ ಭಾರೀ ಗಾತ್ರದ ಟಿಪ್ಪರ್‌ಗಳು, ಬಸ್ ಹಾಗೂ ಇತರೆ ವಾಹನಗಳು ಎಬ್ಬಿಸುವ ದೂಳು, ಅಕ್ಕಪಕ್ಕದ ನಿವಾಸಿಗಳ ಪಾಲಿಗೆ ಅಕರ್ಷಃ ಕಂಟಕವಾಗಿ ಪರಿಣಮಿಸಿದೆ!

ಇದು ತಾಲೂಕಿನ ಮಾಗಡಿ ಗ್ರಾಮದ ನಿವಾಸಿಗಳು ನಿತ್ಯವೂ ಅನುಭವಿಸುತ್ತಿರುವ ನರಕಯಾತನೆಯ ಬದುಕಿನ ಚಿತ್ರಣ. ಈ ಊರಿನ ಮೂಲಕ ಹಾದು ಹೋಗಿರುವ ಹೊನ್ನಾಳಿ-ಗದಗ ರಾಜ್ಯ ಹೆದ್ದಾರಿ ಸೃಷ್ಟಿಸಿರುವ ಆವಾಂತರವಿದು. ನಿಗದಿತ ಸಮಯದಲ್ಲಿ ರಸ್ತೆ ಕಾಮಗಾರಿ ಪೂರ್ಣಗೊಳ್ಳದೆ, ನಿರ್ಮಾಣಕಾರ್ಯ ಕುಂಟುತ್ತ, ತೆವಳುತ್ತ ಸಾಗಿರುವ ಪರಿಣಾಮ, ಈ ರಸ್ತೆ ಸಂಪೂರ್ಣ ಹದಗೆಟ್ಟು ಧೂಳು ಸರ್ವಾಂತರ್ಯಾಮಿಯಾಗಿ ಜನತೆಯ ಜೀವ ಹಿಂಡುತ್ತಿದೆ.

ಗ್ರಾಮದ ಕರ್ನಾಟಕ ಗ್ರಾಮೀಣ ವಿಕಾಸ ಬ್ಯಾಂಕ್ ಮುಂಭಾಗದ ರಸ್ತೆ, ಸಿಬಾರಗಟ್ಟಿ ಕ್ರಾಸ್, ಯಳವತ್ತಿ ಕ್ರಾಸ್ ಸೇರಿದಂತೆ ವಿವಿಧ ಓಣಿಗಳ ಮೂಲಕ ರಸ್ತೆ ಹಾದುಹೋಗಿದೆ. ಆದರೆ, ರಸ್ತೆ ನಿರ್ಮಾಣ ಹೊಣೆ ಹೊತ್ತಿರುವ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಅಧಿಕಾರಿಗಳ ಹಾಗೂ ಗುತ್ತಿಗೆದಾರರ ಪರಮ ನಿರ್ಲಜ್ಜತೆ ಹಾಗೂ ನಿರ್ಲಕ್ಷ್ಯತೆ-ಯ ಪರಮಾವಧಿ ಫಲವಾಗಿ ರಸ್ತೆ ಕಾಮಗಾರಿ ಇನ್ನೂ ಅರೆಬರೆಯಾಗಿಯೇ ಇದೆ. ಇದು ಇಲ್ಲಿನ ಜನರನ್ನು ಸಂಕಷ್ಟದ ದವಡೆಗೆ ಸಿಲುಕಿಸಿದೆ.

ವಾಹನಗಳು ಎಬ್ಬಿಸುವ ಧೂಳು ಇಲ್ಲಿನ ನಿವಾಸಿಗಳ ಮನೆಗಳಿಗೂ ಆವರಿಕೊಳ್ಳುತ್ತಿದೆ. ಮನೆಯೊಳಗಿದ್ದರೂ ವಯಸ್ಕರು, ಮಕ್ಕಳು ಎನ್ನದೇ ಮನೆ ಮಂದಿಯೆಲ್ಲಾ ಇದೇ ಕಲುಷಿತ ಧೂಳನ್ನು ಉಸಿರಾಡಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾರೆ. ಅಸ್ತಮಾ, ಕೆಮ್ಮು, ಕಫದಂತ ಮಾರಕ ರೋಗಗಳು ಇಲ್ಲಿನ ನಿವಾಸಿಗಳನ್ನು ಆವರಿಸಿಕೊಳ್ಳುವ ಭೀತಿ ಎದುರಾಗಿದೆ.

ಈ ರಸ್ತೆಯಲ್ಲಿ ಸಂಚರಿಸುವ ಟಿಪ್ಪರ್ ಸೇರಿದಂತೆ ಬಸ್, ಲಾರಿಗಳ ಸಂಚಾರದ ಭರಾಟೆಗೆ ಸಿಲುಕಿ ರಸ್ತೆ ಅಲ್ಲಲ್ಲಿ ಕಿತ್ತುಹೋಗಿರುವ ಹಿನ್ನೆಲೆಯಲ್ಲಿ ಸಣ್ಣಪುಟ್ಟ ಗುಂಡಿಗಳು ನಿರ್ಮಾಣವಾಗಿವೆ. ಹೀಗಾಗಿ, ಮಳೆಗಾಲದಲ್ಲಿ ಟಿಪ್ಪರ್‌ಗಳ ಹಿಂದೆ ಸಾಗುವ ದ್ವಿಚಕ್ರ ವಾಹನಗಳ ಸವಾರರಿಗೆ ಕೆಸರಿನ ಅಭಿಷೇಕವಾದರೆ, ಬೇಸಿಗೆ ಹಾಗೂ ಚಳಿಗಾಲದಲ್ಲಿ ಧೂಳಿನ ಮಜ್ಜನ ತಪ್ಪದಂತಾಗಿದೆ.

ಇಲ್ಲಿನ ಜನರ ಆರೋಗ್ಯ ಸಂಪೂರ್ಣ ಹದಗೆಡುವ ಮುನ್ನ ಹಾಗೂ ಅವರು ಸಹನೆ ಕಳೆದುಕೊಳ್ಳುವ ಮುನ್ನ ಸ್ವತಃ ವೈದ್ಯರಾಗಿರುವ ಇಲ್ಲಿನ ಶಾಸಕ ಡಾ.ಚಂದ್ರು ಲಮಾಣಿ ಹಾಗೂ ಜಿಲ್ಲಾಡಳಿತ ಸ್ವಲ್ಪ ಮುತುವರ್ಜಿ ವಹಿಸುವ ಮೂಲಕ ಸಂಬಂಧಿಸಿದ ಗುತ್ತಿಗೆದಾರನಿಗೆ ಹಾಗೂ ಕೆಆರ್‌ಐಡಿಎಲ್ ಅಧಿಕಾರಿಗಳಿಗೆ ಖಡಕ್ ನಿರ್ದೇಶನ ನೀಡಿ, ರಸ್ತೆ ಪೂರ್ಣಗೊಳಿಸುವಂತೆ ಹಾಗೂ ಅಲ್ಲಿವರೆಗೂ ಪರ್ಯಾಯ ಕ್ರಮ ಅನುಸರಿಸುವಂತೆ ಸೂಚಿಸಿ, ಇಲ್ಲಿನ ಜನರ ಆರೋಗ್ಯ ಕಾಪಾಡಬೇಕಿದೆ.

> ಇಲ್ಲಿನ ಧೂಳಿನ ಸಮಸ್ಯೆಯನ್ನು ನಿವಾರಿಸುವಂತೆ ಶಾಸಕ ಡಾ.ಚಂದ್ರು ಲಮಾಣಿಯವರ ಗಮನಕ್ಕೆ ತರಲಾಗಿದೆ. ಅವರು, ಸಂಬಂಧಿಸಿದ ಅಧಿಕಾರಿಗಳಿಗೆ ದೂರವಾಣಿ ಮೂಲಕ ರಸ್ತೆ ನಿರ್ಮಾಣ ಆಗುವರೆಗೂ, ನಿತ್ಯವೂ ನೀರು ಚಿಮುಕಿಸುವಂತೆ ಸೂಚಿಸಿದ್ದಾರೆ. ಜಿಲ್ಲಾಧಿಕಾರಿಗೂ ಗ್ರಾಮಸ್ಥರು ದೂರು ನೀಡಿದ್ದಾರೆ. ಅವರು ಸಹ ಇದೇ ಸೂಚನೆ ನೀಡಿದ್ದಾರೆ. ಆದರೆ, ಕೇವಲ ಒಂದೆರಡು ಭಾಗದಲ್ಲಿ ಮಾತ್ರ ನೀರು ಚಿಮುಕಿಸುವ ಟ್ಯಾಂಕರ್‌ಗಳು ಇತರೆ ರಸ್ತೆಗಳತ್ತ ತಿರುಗಿಯೂ ನೋಡಿಲ್ಲ. ಎಲ್ಲಾ ಕಡೆಗೂ ನೀರು ಹಾಕುವಂತೆ ಕೇಳಿದರೆ, ಅದು ನಮಗೆ ಸಂಬಂಧಿಸಿದ ರಸ್ತೆ ಅಲ್ಲ ಎಂದು ಉಢಾಪೆಯ ಉತ್ತರ ನೀಡುತ್ತಾರೆ. ಶಾಸಕರು, ಜಿಲ್ಲಾಡಳಿತದ ಮೊರೆಹೋದರೂ ನಮ್ಮ ಸಮಸ್ಯೆ ನಿವಾರಣೆ ಆಗಿಲ್ಲ.
>
> – ಹೆಸರು ಹೇಳಲಿಚ್ಛಿಸದ ಗ್ರಾಮಸ್ಥ.

ಗ್ರಾಮದ ಸರಹದ್ದು ಸೇರಿದಂತೆ ಖಾನಾಪುರ ಹಾಗೂ ಇತರೆಡೆ ಕ್ವಾರಿಗಳು ತಲೆ ಎತ್ತಿ ನಿಂತಿವೆ. ಇಲ್ಲಿಂದ ಜಲ್ಲಿ ತುಂಬಿಕೊಂಡು ಗ್ರಾಮದ ರಸ್ತೆಯ ಮೂಲಕ ಸಂಚರಿಸುವ ಭಾರೀ ಗಾತ್ರದ ಟಿಪ್ಪರ್‌ಗಳ ದೂಳಿನಲ್ಲಿನ ಹರಳಿನ ಕಣಗಳು ಕಣ್ಣುಗಳಿಗೆ ಮೆತ್ತಿಕೊಳ್ಳುವ ಭೀತಿ ಒಂದೆಡೆಯಾದರೆ, ದೂಳು ತಪ್ಪಿಸಿಕೊಂಡು ಹೋಗಲು, ಮುಖಕ್ಕೆ ಬಟ್ಟೆ ಕಟ್ಟಿಕೊಂಡು, ಟಿಪ್ಪರ್‌ಗಳನ್ನು ಹಿಂದಕ್ಕೆ ಹಾಕುವ ಭರದಲ್ಲಿ ದೂಳಿನಲ್ಲಿಯೇ ವೇಗವಾಗಿ ಚಲಿಸುವ ದ್ವಿಚಕ್ರ ವಾಹನಗಳು ಅಪಘಾತಕ್ಕೂ ಒಳಗಾಗುತ್ತಿವೆ. ಇಂಥಹ ಸಂಭವನೀಯ ಅಪಘಾತಗಳನ್ನು ತಪ್ಪಿಸುವತ್ತ ಜಿಲ್ಲಾಡಳಿತ ಮುಂದಾಗಬೇಕಿದೆ.

### ಸಂವಿಧಾನ, ಪ್ರಜಾಪ್ರಭುತ್ವದ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಬಸವರಾಜ ಹೊರಟ್ಟಿ

# ದೇಶ ಕಟ್ಟುವಲ್ಲಿ ಯುವ ಸಮುದಾಯದ ಪಾತ್ರ ಮಹತ್ವದ್ದು



> ಎಷ್ಟೇ ದೊಡ್ಡವರಿದ್ದರೂ, ಶ್ರೀಮಂತರಿದ್ದರೂ ಎಲ್ಲರಿಗೂ ಒಂದೇ ಮತ. ಆ ಮತದ ಮಹತ್ವದ ಮೇಲೆ ಪ್ರಜಾಪ್ರಭುತ್ವ, ಪ್ರಜೆಗಳ ಹಕ್ಕು ಗಟ್ಟಿಯಾಗಿ ನೆಲೆಯೂರಿದೆ. ಈ ದೇಶದ, ರಾಜ್ಯದ ಜನಪ್ರತಿನಿಧಿಗಳನ್ನು ಆಯ್ಕೆಮಾಡುವ ಅವಕಾಶ ಈ ದೇಶದ ಪ್ರಜೆಗಳಿಗಿದೆ. ಅದನ್ನು ಅರಿತು ದೇಶದ ಹಿತ ಕಾಯುವ ಯೋಗ್ಯರಿಗೆ ಮತ ನೀಡುವ ಅವಕಾಶವಿದೆ. ದೇಶ ಕಟ್ಟುವಲ್ಲಿ, ಸಶಕ್ತ ಪ್ರಜಾಪ್ರಭುತ್ವ ನಿರ್ಮಾಣ ಮಾಡುವಲ್ಲಿ ನಿಮ್ಮ ಪಾತ್ರ ಕೂಡಾ ಅಷ್ಟೇ ಮಹತ್ವದ್ದಾಗಿದೆ ಎಂದು ಹೊರಟ್ಟಿ ಹೇಳಿದರು.

■ವಿಜಯಸಾಕ್ಷಿ ಸುದ್ದಿ, ಗದಗ

ಸಾವಿರಾರು ಜಾತಿ, ಮತ, ಪಂಗಡಗಳನ್ನು ಒಳಗೊಂಡ ಭಾರತದಲ್ಲಿ ವಿವಿಧತೆಯಲ್ಲಿ ಏಕತೆ ಮೂಡಲು ಬಾಬಾಸಾಹೇಬ ಅಂಬೇಡ್ಕರ್ ನೇತೃತ್ವದ ಸಂವಿದಾನ ಹಾಗೂ ಪ್ರಜಾಪ್ರಭುತ್ವ ಕಾರಣ. ಆದ್ದರಿಂದ, ಭಾರತೀಯರ ಪಾಲಿಗೆ ಸಂವಿಧಾನವೇ ಉಸಿರು ಎಂದರೆ ತಪ್ಪಾಗಲಾರದು ಎಂದು ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ಅವರು ಸಿದ್ದಲಿಂಗ ನಗರದ ಸರಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ಬನ್ನಿಮುಡಿಯುವ ಕಾರ್ಯಕ್ರಮ, ವಿವಿಧ ಕಟ್ಟಡ ಕಾಮಗಾರಿಗಳ ವೀಕ್ಷಣೆ, ಅಭಿನಂದನಾ ಕಾರ್ಯಕ್ರಮ ಹಾಗೂ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಕುರಿತು ವಿದ್ಯಾರ್ಥಿಗಳೊಂದಿಗೆ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಶಾಲಾ ಸಿಬ್ಬಂದಿ, ವಿದ್ಯಾರ್ಥಿಗಳು ಬನ್ನಿ ನೀಡುವ ಮೂಲಕ ವಿಜಯದಶಮಿಯನ್ನು ಆಚರಿಸಿದರು. ಇತ್ತೀಚೆಗೆ ಯುರೋಪ್ ದೇಶಗಳ ಪ್ರವಾಸವನ್ನು ಯಶಸ್ವಿಯಾಗಿ ಮುಗಿಸಿದ ಬಸವರಾಜ ಹೊರಟ್ಟಿಯವರನ್ನು ಶಾಲಾ ಸಿಬ್ಬಂದಿ ಗೌರವಿಸಿದರು.

ಈ ಸಂದರ್ಭದಲ್ಲಿ ಡಾ.ಬಸವರಾಜ ಧಾರವಾಡ, ಸಾ.ಶಿ ಇಲಾಖೆ ಉಪನಿರ್ದೇಶಕ ಎಂ.ಎ ರಡ್ಡೇರ, ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರಡಿ, ನಡುವಿನಮನಿ, ನಗರಸಭಾ ಸದಸ್ಯೆ ವಿದ್ಯಾವತಿ ಗಡಗಿ, ಎಸ್.ಎಂ ಅಗಡಿ, ಮುಖ್ಯೋಪಾಧ್ಯಾಯೆ ಪಾರ್ವತಿ ವಸ್ತ್ರದ, ಜಯಲಕ್ಷ್ಮೀ ಅಣ್ಣಿಗೇರಿ, ಎಸ್.ಆರ್ ಹನಮಗೌಡ್ರ, ಎಸ್.ಜಿ ಕುಲಗುಡಿ, ಎಮ್.ಆಯ್ ಶಿವನಗೌಡ್ರ, ಎಂ.ಪಿ ಸಾಂಬ್ರಾಣಿ, ಎಸ್.ಬಿ ಗುಳೇದವರ, ಎಸ್.ಎಂ ಪತ್ತಾರ, ಎಸ್.ಎಸ್ ಗಾಳಿ, ಆರ್.ವಾಯ್ ಬಸರಿ, ಎಸ್.ಎ ಬಾಣದ, ಎಸ್.ಎ ಗದ್ದನಕೇರಿ, ಎನ್.ಆರ್ ಶಿರೋಳ, ಎಸ್.ಯು ಕುಷ್ಟಗಿ, ಜಿ.ಎನ್ ಅಳವಂಡಿ, ಪಿ.ವ್ಹಿ ದಾಸರ, ಎಲ್.ಎಸ್ ಮಾಳೊತ್ತರ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಗಜೇಂದ್ರಗಡದ ಗವಿಮಠದಲ್ಲಿ ಕಸಾಪದಿಂದ ನಡೆದ ದಸರಾ ಕವಿಗೋಷ್ಠಿಯಲ್ಲಿ ನಾಗರಾಜ ಬುಟ್ಟಾ, ಶರಣಪ್ಪ ಬೇವಿನಕಟ್ಟಿ ಹಾಗೂ ಇನ್ನಿತರರು ಕವನ ವಾಚಿಸಿದರು. ಕಸಾಪ ತಾಲೂಕಾಧ್ಯಕ್ಷ ಎ.ಪಿ ಗಾಣಗೇರ, ಬಿ.ಎ ಕೆಂಚರಡ್ಡಿ, ಎಸ್.ಐ ಪತ್ತಾರ ಮುಂತಾದವರು ಇದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಯೊಂದಿಗೆ ಉನ್ನತ ಮಟ್ಟದ ಸಭೆ ನಡೆಸಿದರು. ಹೆಚ್ಚಿನ ಅರ್ಹತೆ ಹೊಂದಿರುವವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕು ಮತ್ತು ಪ್ರಶಸ್ತಿ ಪುರಸ್ಕೃತರ ಆಯ್ಕೆಯಲ್ಲಿ ಪ್ರಾದೇಶಿಕ ನ್ಯಾಯವನ್ನು ಅನುಸರಿಸಬೇಕು ಎಂದು ಮುಖ್ಯಮಂತ್ರಿ ಸಲಹೆ ನೀಡಿದರು.

# ನಕಲಿ ಉಗುರನ್ನೂ ಧರಿಸುವಂತಿಲ್ಲ: ಸಚಿವ ಈಶ್ವರ ಖಂಡ್ರೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು



ಉಗುರು, ಚರ್ಮ ಸೇರಿದಂತೆ ವನ್ಯಜೀವಿಗಳ ವಸ್ತುಗಳನ್ನು ಸರ್ಕಾರಕ್ಕೆ ಮರಳಿಸುವ ಕೊನೆಯ ಅವಕಾಶ ನೀಡುವ ಕಾನೂನು ಬಗ್ಗೆ ಚರ್ಚೆನಡೆಸುವ ಸಾಧ್ಯತೆಗಳ ಕುರಿತು ಪರಾಮರ್ಶಿಸಲಾಗುತ್ತಿದೆ ಎಂದು ರಾಜ್ಯ ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದ್ದಾರೆ.

ಹುಲಿ ಉಗುರು ಧರಿಸಿದ್ದ ಹಿನ್ನಲೆಯಲ್ಲಿ ಬಿಗ್ ಬಾಸ್ ಮನೆಯಿಂದ ವರ್ತೂರು ಸಂತೋಷ್ ಬಂಧನವಾದ ಬೆನ್ನಲ್ಲೇ ಇದೀಗ ರಾಜ್ಯಾದ್ಯಂತ ಅರಣ್ಯಾಧಿಕಾರಿಗಳ ದಾಳಿ ನಡೆದಿರುವಂತೆಯೇ ಇತ್ತ ಈ ಬಗ್ಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಸ್ಪಷ್ಟನೆ ನೀಡಿದ್ದು, ವನ್ಯಜೀವಿಗಳ ವಸ್ತುಗಳನ್ನು ಸರ್ಕಾರಕ್ಕೆ ಮರಳಿಸುವ ಕೊನೆಯ ಅವಕಾಶ ನೀಡುವ ಕಾನೂನು ಬಗ್ಗೆ ಚರ್ಚೆನಡೆಸುವ ಸಾಧ್ಯತೆಗಳ ಕುರಿತು ಪರಾಮರ್ಶಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಈ ಕುರಿತು ವಿಕಾಸಸೌಧದಲ್ಲಿ ಅರಣ್ಯ ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದ ಬಳಿಕ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ಹುಲಿ ಉಗುರಿನ ನಕಲಿ ಸಹಿತ ಈ ರೀತಿಯ ಪೆಂಡೆಂಟ್ ಹಾಕಿಕೊಳ್ಳಬಾರದೆಂದು ಮನವಿ ಮಾಡುತ್ತೇನೆ. ನಕಲಿಯಿಂದಲೂ ಪ್ರೇರಣೆ ಆಗುತ್ತದೆ, ನಕಲಿ ಹಾಕಿಕೊಂಡವರ ವಿರುದ್ಧ ಕ್ರಮದ ಬಗ್ಗೆ ಕಾಯಿದೆಯಲ್ಲಿ ಇಲ್ಲ. ಆದರೆ, ನಕಲಿ ಪೆಂಡೆಂಟ್ ಗಳನ್ನು ಯಾರು ಹಾಕಿಕೊಳ್ಳಬಾರದೆಂದು ಮನವಿ ಮಾಡಿದರು.

ನಕಲಿನೂ ಉಗುರು ಅಥವಾ ಇತರೆ ವಸ್ತುಗಳನ್ನೂ ಹಾಕಿಕೊಳ್ಳಬಾರದು, ಅದನ್ನು ಹಾಕಿಕೊಂಡ್ರೆ ಬೇರೆಯವರಿಗೆ ಪ್ರಚೋದನೆ ಮಾಡಿದಂತೆ. ಅವಾಗ ಪ್ರಾಣಿಗಳ ಹತ್ಯೆಯ ಪ್ರಯತ್ನಗಳು ಆಗುತ್ತವೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದರು.

# ಶ್ರೀ ಅನ್ನಪೂರ್ಣೇಶ್ವರಿ ಕುಂಭೋತ್ಸವ



■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಮುಳಗುಂದ ನಾಕಾ ಬಳಿ ಇರುವ ಅಡವೀಂದ್ರಸ್ವಾಮಿ ಮಠದ ಶ್ರೀ ಅನ್ನಪೂರ್ಣೇಶ್ವರಿ ದೇವಿಯ 9ನೇ ವರ್ಷದ ಜಾತ್ರಾ ಮಹಾರಥೋತ್ಸವದ ಅಂಗವಾಗಿ ಗದಗ ಒಕ್ಕಲಗೇರಿಯ ರಾಚೋಟಿ ವೀರಭದ್ರೇಶ್ವರ ದೇವಸ್ಥಾನದಿಂದ ಅಡವೀಂದ್ರಸ್ವಾಮಿ ಮಠದವರೆಗೆ ಕುಂಭೋತ್ಸವವು ಬುಧವಾರ ಶ್ರದ್ಧಾಭಕ್ತಿಯಿಂದ ಜರುಗಿತು. ಕುಂಭೋತ್ಸವದ ಬಳಿಕ ಅನ್ನಪೂರ್ಣೇಶ್ವರಿ ದೇವಿಗೆ ಕುಂಭಾಭಿಷೇಕ, ಪೂಜಾ ಸಮಿತಿಯ ವೈದಿಕ ವೃಂದದಿಂದ ಶ್ರೀ ರುದ್ರ ಪಠಣ ಜರುಗಿತು. ಶ್ರೀಮಠದ ಗುರುಗಳ ಪುಣ್ಯಸ್ಮರಣೋತ್ಸವದ ನಂತರ ಮಹಾಪ್ರಸಾದ ಜರುಗಿ-ತು. ಜಾತ್ರಾ ಸಮಿತಿ, ಶಿವಾನುಭವ ಸಮಿತಿ ಹಾಗೂ ಮಹಿಳಾ ಮಂಡಳದ ಪದಾಧಿಕಾರಿಗಳು, ಸರ್ವ ಭಕ್ತಾಧಿಗಳು ಕುಂಭೋತ್ಸವದಲ್ಲಿ ಪಾಲ್ಗೊಂಡಿದ್ದರು.

### ಜಿಲ್ಲಾ ಕಸಾಪ 'ದಸರಾ ಕಾವ್ಯ ಸಂಭ್ರಮ'ದಲ್ಲಿ ಪ್ರೊ. ವಿಷ್ಣುಕಾಂತ ಚಟಪಲ್ಲಿ ನುಡಿ

# ವಾಸ್ತವದ ಅರಿವು, ಭವಿಷ್ಯದ ಚಿಂತನೆಗಳಿಂದ ಕಾವ್ಯ ರಚಿಸಿ



■ವಿಜಯಸಾಕ್ಷಿ ಸುದ್ದಿ, ಗದಗ

ಗ್ರಾಮೀಣ ಪ್ರದೇಶದಲ್ಲಿ ಕಲೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಮತ್ತು ಇಂದಿನ ತಲೆಮಾರಿಗೆ ಪರಿಚಯಿಸುವ ಮಹತ್ವದ ಕಾರ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತು ಮಾಡುತ್ತಿದೆ. ಕವಿಗಳು ತಮ್ಮ ಕಾವ್ಯದಲ್ಲಿ ವಾಸ್ತವದ ಅರಿವನ್ನು, ಭವಿಷ್ಯದ ಚಿಂತನೆಗಳನ್ನು ಪ್ರತಿಪಾದಿಸಬೇಕೆಂದು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವಿಷ್ಣುಕಾಂತ ಚಟಪಲ್ಲಿ ನುಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಗದಗ ಹಾಗೂ ಸಾಮಾಜಿಕ ಸಾಂಸ್ಕೃತಿಕ ವೇದಿಕೆ ಕ.ರಾ.ಗ್ರಾ. ಮತ್ತು ಪಂ.ರಾಜ್ ವಿಶ್ವವಿದ್ಯಾಯಲಯ ನಾಗಾವಿಯಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ದಸರಾ ಕವಿಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕವಿಗೋಷ್ಠಿಯ ಆಶಯ ನುಡಿಗಳನ್ನಾಡಿದ ಗೊಜನೂರಿನ ಕವಿ, ವಕೀಲ ಬಸವರಾಜ ಸಂಶಿ ಮಾತನಾಡಿ, ಇವತ್ತಿನ ಸಂದರ್ಭದಲ್ಲಿ ಕವಿ, ಕಲಾವಿದರು, ಸಾಹಿತಿಗಳ, ಮೇಲೆ ದೊಡ್ಡ ಜವಾಬ್ದಾರಿಯಿದೆ. ಇವರಿಂದ ಸಮಾಜವನ್ನು ತಿದ್ದುವ, ಒಳಿತಿನೆಡೆಗೆ ಕೊಂಡೊಯ್ಯುವ ಕಾರ್ಯವಾಗಬೇಕಿದೆ. ಪ್ರಾಚೀನ ಸಾಹಿತ್ಯ ರಾಜಾಶ್ರಯದಲ್ಲಿತ್ತು. ಆದರೆ ಈಗ ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ. ವಿಚಾರ ಅಭಿವ್ಯಕ್ತಿ ಮುಕ್ತವಾಗಿರಲು ನಮ್ಮ ಸಂವಿಧಾನ ನಮಗೆ ಹಕ್ಕು ಕೊಟ್ಟಿದೆ. ಸಮಾಜವನ್ನು ತಿದ್ದುವ, ತಪ್ಪೆಸಗಿದವರನ್ನು ತಿವಿಯುವ ಕಾರ್ಯವನ್ನು ಕವಿಗಳ ಕವಿತೆಗಳು ಮಾಡಬೇಕೆಂದು ಆಶಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ, ಕವಿಗಳಿಗೆ ಅಧ್ಯಯನ ಬೇಕು. ಬರೆದ ಕವಿತೆಯನ್ನು ಹಲವಾರು ಬಾರಿ ಪರಾಮರ್ಶಿಸಿ ಪ್ರಕಟಸುವದಾಗಬೇಕು. ಧಾವಂತದಲ್ಲಿ ಪ್ರಕಟವಾಗುವ ಕವಿತೆ ಬಹುಕಾಲ ಬಾಳುವುದಿಲ್ಲ. ಕವಿ ಬರೆದ ಒಂದೇ ಒಂದು ಕವಿತೆಯಿಂದ ಜಗತ್ಪ್ರಸಿದ್ಧನಾಗಬಲ್ಲ. ಅಂತಹ ಅನೇಕ ಉದಾಹರಣೆಗಳನ್ನು ಕನ್ನಡದ ಸಂದರ್ಭದಲ್ಲಿ ಗಮನಿಸಿಬಹುದು. ಪ್ರತಿಯೊಬ್ಬರ ಕವಿತೆಗಳನ್ನು ಆಲಿಸಿ ನಂತರ ಅವರಿಗೆ ಮಾರ್ಗದರ್ಶನ ನೀಡುವ ಮೂಲಕ ಉತ್ಕೃಷ್ಟ ರಚನೆಯೆಡೆಗೆ ಸಾಗಲು ಅನುವು ಮಾಡಿಕೊಡಬೇಕೆಂದು ತಿಳಿಸಿದರು.

ಕವಿಗೋಷ್ಠಿಯಲ್ಲಿ ಡಾ. ಚಂದ್ರಪ್ಪ ಬಾರಂಗಿ, ಬಸವರಾಜ ನೆಲಜೇರಿ, ಕೊಟ್ರೇಶ ಜವಳಿ, ಎಂ.ಡಿ ಮಾದರ. ಎಸ್.ಕೆ ಆಡಿನ, ಎಸ್.ವಿ ಕಾಕೋಳ, ಮಂಜುನಾಥ ವಾಲ್ಮೀಕಿ, ಶರಣಪ್ಪ ಪೂಜಾರ, ಕಲಾಶ್ರೀ ಹಾದಿಮನಿ, ಸ್ನೇಹಾ ಮಾಲಿಗೌಡ್ರ, ಜ್ಯೋತಿ ಮ್ಯಾಗೇರಿ, ಶರಣು ದಂಡಿನ, ಸೋಮಶೇಖರ ಬಾರ್ಕಿ, ಈಶ್ವರ ಕುರಿ, ವಿಶ್ವನಾಥ ಬೇಂದ್ರೆ, ಆನಂದಕುಮಾರ ಮೇಗಡಿ, ಬಸವರಾಜ ಕ್ಯಾರಕೊಪ್ಪ, ಮಂಜುನಾಥ ಡೋಣಿ, ಕಳಕಪ್ಪ ಜಲ್ಲಿಗೇರಿ, ರವಿ ದೇವರಡ್ಡಿ, ಮಹಾಂತೇಶ ಮಲ್ಲಾರಿ, ಎಂ.ಆಯ್ ಸವದತ್ತಿ, ಪವಿತ್ರಾ ಹೂಗಾರ, ಶ್ವೇತಾ ಹೂಗಾರ, ಸಂಗೀತಾ ಹಡಪದ, ರತ್ನಾ ಬದಿ, ಭುವನೇಶ್ವರಿ ಅಂಗಡಿ, ಸವಿತಾ ಕಲಹಾಳ, ಶಾರದಾ ಬಾಣದ ಮೊದಲಾದವರು ಕವನ ವಾಚನ ಮಾಡಿದರು.

ಕಾರ್ಯಕ್ರಮದಲ್ಲಿ ಉಮಾ ಕಣವಿ, ನಿರ್ಮಲಾ ತಡವಾಡೆ, ಆನಂದ ಹಡಪದ, ಎಂ.ಎಸ್ ಅಸುಂಡಿ, ಡಾ. ಶಂಕರ ಬಾರಿಕೇರ, ಸಿ.ಎಂ ಮಾರನಬಸರಿ ಮೊದಲಾದವರು ಉಪಸ್ಥಿತರಿದ್ದರು. ವೇದಿಕೆಯ ಮೇಲೆ ಪ್ರೊ. ಬಸವರಾಜ ಲಕ್ಕಣ್ಣವರ, ಕಾರ್ಯದರ್ಶಿ ಶಿವಾನಂದ ಗಿಡ್ನಂದಿ ಉಪಸ್ಥಿತರಿದ್ದರು. ಡಾ. ಸಂಜಯಕುಮಾರ ಹಾರೋಬೀಡಿ ನಿರೂಪಿಸಿದರು. ಡಾ. ಚಂದ್ರಪ್ಪ ಬಾರಂಗಿ ಸ್ವಾಗತಿಸಿದರು. ಪ್ರೊ. ಕಿಶೋರಬಾಬು ನಾಗರಕಟ್ಟಿ ವಂದಿಸಿದರು.

# ಅನ್ನಪೂರ್ಣೇಶ್ವರಿ ಜಾತ್ರಾ ಮಹಾರಥೋತ್ಸವ



■ವಿಜಯಸಾಕ್ಷಿ ಸುದ್ದಿ, ಗದಗ

ಮುಳಗುಂದ ನಾಕಾ ಬಳಿ ಇರುವ ಅಡವೀಂದ್ರಸ್ವಾಮಿ ಮಠದ ಶ್ರೀ ಅನ್ನಪೂರ್ಣೇಶ್ವರಿದೇವಿ 9ನೇ ವರ್ಷದ ಜಾತ್ರಾ ಮಹಾರಥೋತ್ಸವವು ಬುಧವಾರ ಜರುಗಿತು.

ಗದುಗಿನ ರಾಚೋಟಿ ವೀರಭದ್ರೇಶ್ವರ ಪುರವಂತರ ಸಂಘ ಹಾಗೂ ಗದುಗಿನ ಗುಲಾಬ ಬ್ಯಾಂಡ್ ಕಲಾ ತಂಡ ಸೇರಿದಂತೆ ಇತರ ಕಲಾತಂಡಗಳ ವಾದ್ಯ ವೈಭವದೊಂದಿಗೆ ಮಠಾಧೀಶರ ಸಾನ್ನಿಧ್ಯದಲ್ಲಿ ಮಹಿಳೆಯರು ದೇವಿಯ ತೇರನ್ನು ಎಳೆದರು. ಗದುಗಿನ ಆಧ್ಯಾತ್ಮ ವಿದ್ಯಾಶ್ರಮದ ಪೂಜ್ಯ ಶಿವಶರಣೆ ಡಾ.ನೀಲಮ್ಮತಾಯಿ ಅಸುಂಡಿ ಅವರು ದೇವಿಯ ರಥೋತ್ಸವಕ್ಕೆ ಶುಭಾಶೀರ್ವಾದದ ಚಾಲನೆ ನೀಡಿದರು.

ಶ್ರೀಮಠದ ಧರ್ಮದರ್ಶಿ ವೇ.ಮಹೇಶ್ವರ ಸ್ವಾಮಿಗಳು ಹೊಸಳ್ಳಿಮಠ, ಜಾತ್ರಾ ಸಮಿತಿಯ ಅಧ್ಯಕ್ಷ ಪ್ರಕಾಶ ಬಂಡಿ, ಕಾರ್ಯಾಧ್ಯಕ್ಷ ಬಸವರಾಜ ಪಲ್ಲೇದ, ಪ್ರಧಾನ ಕಾರ್ಯದರ್ಶಿ ಶಿವಪುತ್ರಪ್ಪ ಸಜ್ಜನ, ಸಹ ಕಾರ್ಯದರ್ಶಿ ಸಿದ್ಧಣ್ಣ ಜವಳಿ, ಕೋಶಾಧ್ಯಕ್ಷ ಯು.ಆರ್ ಭೂಸನೂರಮಠ, ಶಿವಾನುಭವ ಸಮಿತಿಯ ಅಧ್ಯಕ್ಷ ವ್ಹಿ.ಎಂ ಕುಂದ್ರಾಳಹಿರೇಮಠ, ಜಾತ್ರಾ ಮಹೋತ್ಸವದ ಮಹಿಳಾ ಸಮಿತಿಯ ಅಧ್ಯಕ್ಷೆ ಪ್ರಮೀಳಾದೇವಿ ಬಳಿಗಾರ, ಪ್ರಧಾನ ಕಾರ್ಯದರ್ಶಿ ಕಮಲಾಕ್ಷಿ ಬೆಳ್ಳಿಕೊಪ್ಪ, ಸಹಕಾರ್ಯದರ್ಶಿ ವಿಜಯಲಕ್ಷ್ಮೀ ಹೊಸಳ್ಳಿಮಠ, ಕೋಶಾಧ್ಯಕ್ಷೆ ಸುವರ್ಣಾ ಮದರಿಮಠ ಅವರ ನೇತೃತ್ವದಲ್ಲಿ ಶಾಂತಕ್ಕ ಹಿರೇವಡೆಯರ, ಶಾರದಾ ಬೊಮ್ಮಸಾಗರ, ಲೀಲಾಬಾವತಿ ಬಿಳೇಯಲಿ, ಸುರೇಖಾ ಪಿಳ್ಳಿ, ಶಾಂತಾಬಾಯಿ ಬಾಕಳೆ, ಜಯಶ್ರೀ ಹಿರೇಮಠ, ಸಂಧ್ಯಾ ಕೋಟಿ, ಸುಲೋಚನಾ ಐಹೊಳ್ಳಿ, ಶಿವಲೀಲಾ ಅಕ್ಕಿ, ಲಲಿತಾ ಹಿರೇಮಠ, ಗೌರಾದೇವಿ ಶಾಬಾದಿಮಠ, ಶಿವಲೀಲಾ ಕುರಡಗಿ, ಸುಶೀಲಾ ಕೋಟಿ, ಯಶೋದಾ ಗಿಡ್ನಂದಿ, ಕಸ್ತೂರಿಬಾಯಿ ಭಾಂಡಗೆ, ಗಿರಿಜಾದೇವಿ ನಾಲತ್ವಾಡಮಠ, ಶಾಂತಾ ಸಂಕನೂರ, ಪ್ರೇಮಾ ಗ್ವಾರಿ, ಜಯಶ್ರೀ ಉಗಲಾಟದ, ಅಕ್ಕಮಹಾದೇವಿ ಬಳಿಗಾರ, ಗೀತಾ ಹೂಗಾರ ಮುಂತಾದವರು ಪಾಲ್ಗೊಂಡಿದ್ದರು.

# ಮೊದಲು ನಾವು ಸಂಸ್ಕಾರವಂತರಾಗಬೇಕು



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಾಲಕರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿದಲ್ಲಿ ಮಾತ್ರ ಅವರ ಬದುಕು ಸುಂದರವಾಗುತ್ತದೆ ಎಂದು ಹೊಸಳ್ಳಿ ಬೂದೀಶ್ವರ ಮಠದ ಅಭಿನವ ಬೂದೀಶ್ವರ ಮಾಹಾಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಹಳೆಹುಡದ ಗ್ರಾಮದೇವಿ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ ಜರುಗಿದ ಪುರಾಣ ಮಂಗಲೋತ್ಸವದ ಸಾನ್ನಿಧ್ಯ ವಹಿಸಿ ಮಾತನಾಡಿ, ಇಂದಿನ ಮಕ್ಕಳಿಗೆ ಒಳ್ಳೆಯ ಸಂಸ್ಕಾರ, ಉತ್ತಮ ಶಿಕ್ಷಣ ನೀಡಿದಲ್ಲಿ ಉತ್ತಮ ಸಂಸ್ಕಾರವಂತ ಮಗುವಾಗಿ ಬೆಳೆಯುತ್ತಾನೆ. ಮನೆಯೇ ಮೊದಲ ಪಾಠಶಾಲೆ ಎನ್ನುವಂತೆ ಮನೆಯಿಂದಲೇ ಮಗು ಎಲ್ಲವನ್ನು ಕಲಿಯುತ್ತದೆ. ಆದುದರಿಂದ ನಾವು ಮೊದಲು ಸಂಸ್ಕಾರವಂತರಾಗಬೇಕು ಎಂದರು.

ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ ಮಾತನಾಡಿ, ಸಮಾಜದಲ್ಲಿ ನಿಸ್ವಾರ್ಥ ಸೇವೆ ಮಾಡಿದರೆ ಸಮಾಜ ಗೌರವಿಸುತ್ತದೆ. ವೈದ್ಯ ವೃತ್ತಿಯಲ್ಲಿ ನೀಡಿದ ನಿಸ್ವಾರ್ಥ ಸೇವೆಯನ್ನು ಗುರುತಿಸಿ ಸಮಾಜ ರಾಜಕೀಯ ವೃತ್ತಿಗೆ ಇಂದು ಕರೆತಂದಿದ್ದಾರೆ. ಇಂದು ಭೀಕರ ಬರಗಾಲ ನಮ್ಮನ್ನು ಕಾಡುತ್ತಿದ್ದು, ಸರಕಾರ ರೈತರ ನೆರವಿಗೆ ಧಾವಿಸಿ ಪರಿಹಾರ ನೀಡಲಿ. ರೈತರ ಕಷ್ಟ ದೂರವಾದಾಗ ಮಾತ್ರ ನೆಮ್ಮದಿಯ ಬದುಕು ಸಾಧ್ಯವಾಗುತ್ತದೆ ಎಂದರು.

ನೀಲಗುಂದ ಗುದ್ನೇಶ್ವರಮಠದ ಪ್ರಭುಲಿಂಗ ದೇವರು ನೇತೃತ್ವ ವಹಿಸಿದ್ದರು. ಪಿ.ಎಸ್ ಮರಿದೇವರಮಠ, ಕಾಶಿನಾಥ ಮರಿದೇವರಮಠ, ಎಸ್.ಎಂ ನೀಲಗುಂದ, ಎಂ.ಡಿ ಬಟ್ಟೂರ, ಅಶೋಕ ಸೋನಗೋಜಿ, ಎಸ್.ಸಿ ಬಡ್ನಿ, ಬಸವರಾಜ ಹಾರೋಗೇರಿ, ಶಂಕ್ರಪ್ಪ ಮಡ್ಡಿ, ಮಾಹಾಂತಪ್ಪ ಬಳ್ಳಾರಿ, ಕೆ.ಎಸ್ ಮಳ್ಳಿ, ಗಂಗಪ್ಪ ಸುಂಕಾಪೂರ, ನಾಗರಾಜ ಕಮಾಜಿ ಇದ್ದರು.

# ಕುವೈತ್‌ನಲ್ಲಿ ನಡೆಯಲಿರುವ ಮಾಧ್ಯಮ ಶಿಕ್ಷಕರ ಸಮ್ಮೇಳನಕ್ಕೆ ಡಾ.ಬಿ.ಕೆ. ರವಿ



■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಮಾಧ್ಯಮ ಶಿಕ್ಷಕರ ಸಂಘದ 27ನೇ ವಾರ್ಷಿಕೋತ್ಸವ ಹಿನ್ನೆಲೆಯಲ್ಲಿ ಕುವೈತ್‌ನಲ್ಲಿ ಹಮ್ಮಿಕೊಂಡಿರುವ ಅಂತಾರಾಷ್ಟ್ರೀಯ ಮಾಧ್ಯಮ ಶಿಕ್ಷಕರ ಸಮ್ಮೇಳನವನ್ನು ಕೊಪ್ಪಳ ವಿಶ್ವ ವಿದ್ಯಾಲಯದ ಕುಲಪತಿಡಾ.ಬಿ.ಕೆ. ರವಿ ಅವರು ಪ್ರತಿನಿಧಿಸಲಿದ್ದಾರೆ.

ಸಮ್ಮೇಳನದಲ್ಲಿ 'ಬದಲಾಗುತ್ತಿರುವ ಮಾಧ್ಯಮದ ಆಯಾಮಗಳು ಮಾಧ್ಯಮ ಸಂಗಮ ಮತ್ತು ವಿಭಜನೆ' ಕುರಿತ ವಿಷಯದ ಮೇಲೆ ಉಪನ್ಯಾಸ ಮಂಡಿಸಲಿದ್ದಾರೆ ಎಂದು ಮಾಧ್ಯಮ ಶಿಕ್ಷಕರ ಸಂಘ ಪ್ರಕಟಣೆಯಲ್ಲಿ ತಿಳಿಸಿದೆ.

ಸಂಘಟಕರಆಮಂತ್ರಣದ ಹಿನ್ನೆಲೆಯಲ್ಲಿ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿರುವ ಡಾ.ಬಿ.ಕೆ. ರವಿ ಅವರು, 'ಮಾಧ್ಯಮ ಸಂಗಮದ ಯುಗದಲ್ಲಿ ಆರೋಗ್ಯ ಸಂವಹನದ ಗ್ರಹಿಕೆ' ಕುರಿತಾದ ಸಂಶೋದನಾ ಪ್ರಬಂಧವನ್ನು ಮಂಡಿಸುವರು. ಈ ಮಾಧ್ಯಮ ಶಿಕ್ಷಕರ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಅಮೇರಿಕ ಸೇರಿದಂತೆ ಸುಮಾರು 25ಕ್ಕೂ ರಾಷ್ಟ್ರಗಳ ಮಾಧ್ಯಮ ಶಿಕ್ಷಕರು, ವೃತ್ತಿಪರರು ಹಾಗೂ ಮಾಧ್ಯಮ ತಜ್ಞರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು

# ಭಕ್ತರ ಭಕ್ತಿ, ನಿಷ್ಠೆ ಶ್ರೀಮಠದ ಆಸ್ತಿ



ಈ ಸಾರೆಯ ಜಾತ್ರೆಯನ್ನು ವೈಶಿಷ್ಟ್ಯಪೂರ್ಣವಾಗಿ ಆಚರಿಸಲು ಎಲ್ಲ ಭಕ್ತರೂ ತೀರ್ಮಾನಿಸಿದ್ದು, ಅದರಂತೆ ಅನೇಕ ವಿಶೇಷ ಕಾರ್ಯಕ್ರಮಗಳು ಜರುಗಲಿವೆ. ಒಂದು ದಿನ ಯೋಧರ ಸ್ಮರಣೆ, ಮತ್ತೊಂದು ದಿನ ಮಕ್ಕಳ ಹಬ್ಬ, ಮಹಿಳಾ ಗೋಷ್ಠಿ ಹೀಗೆ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಡಿಸೆಂಬರ್ 5ರಂದು ನಡೆಯುವ ಮಹಿಳಾ ಗೋಷ್ಠಿಯಲ್ಲಿ ನಾಡಿನ ಖ್ಯಾತ ಅಂಕಣಗಾರ್ತಿ ಮತ್ತು ವಾಗ್ಮಿ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿಯವರು ಭಾಗವಹಿಸುತ್ತಿರುವುದು ವಿಶೇಷ ಎಂದು ಮಲ್ಲಿಕಾರ್ಜುನ ಶಿವಾಚಾರ್ಯರು ತಿಳಿಸಿದರು.

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಭಕ್ತರು ಮಠದೆಡೆಗೆ ತೋರುವ ಭಕ್ತಿ ಮತ್ತು ನಿಷ್ಠೆಗಳು ಆ ಶ್ರೀಮಠದ ಆಸ್ತಿಯಾಗಿರುತ್ತವೆ. ಇದರಿಂದ ಗುರು-ಶಿಷ್ಯ ಪರಂಪರೆ ಮುಂದುವರೆಯಲು ಸಹಾಯಕವಾಗುತ್ತದೆ. ನರೇಗಲ್ಲ ಮತ್ತು ಸುತ್ತಲಿನ ಭಕ್ತರು ಹಿರೇಮಠದ ಬಗ್ಗೆ ತೋರುತ್ತಿರುವ ಪ್ರೀತಿ, ಕಾಳಜಿ ಅನನ್ಯವಾಗಿದೆ ಎಂದು ಹಿರೇಮಠದ ಷ.ಬ್ರ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಹೇಳಿದರು.

ಡಿಸೆಂಬರ್ 1ರಿಂದ 11ರವರೆಗೆ ನಡೆಯಲಿರುವ ಶ್ರೀಮಠದ ಜಾತ್ರಾ ಮಹೋತ್ಸವದಲ್ಲಿ ಏರ್ಪಡಿಸಬೇಕಾದ ಕಾರ್ಯಕ್ರಮಗಳ ಪೂರ್ವಭಾವಿ ಸಭೆಯ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಈ ಸಾರೆ ಸಿದ್ಧಾಂತ ಶಿಖಾಮಣಿ ಪ್ರವಚನದ ಕೆಲ ಭಾಗವನ್ನು ಭಕ್ತರಿಂದಲೇ ಹೇಳಿಸುವ ನಿರ್ಧಾರ ಮಾಡಲಾಗಿದೆ. ಅದಕ್ಕಾಗಿ ಈಗಾಗಲೇ ಕೆಲವು ವಾಗ್ಮಿಗಳನ್ನು ಗುರುತಿಸಲಾಗಿದೆ ಎಂದು ತಿಳಿಸಿದ ಶ್ರೀಗಳು, ಜಾತ್ರೆಯ ಅಂಗವಾಗಿ ಹೇಮರಡ್ಡಿ ಮಲ್ಲಮ್ಮನ ಪುರಾಣವನ್ನು ತಾವೇ ಹೇಳುವುದಾಗಿ ತಿಳಿಸಿದರು. ಸಭೆಯಲ್ಲಿ ಬೀಚಿ ಬಳಗದ ಅಧ್ಯಕ್ಷ ಕೆ.ಎಸ್ ಕಳಕಣ್ಣವರ, ಡಾ. ಕಲ್ಲಯ್ಯ ಹಿರೇಮಠ, ಜಗದೀಶಗೌಡ ಸಂಕನಗೌಡ್ರ, ಶಿವನಗೌಡ ಪಾಟೀಲ, ಡಯಟ್‌ನ ಉಪನ್ಯಾಸಕ ಕೆ.ಪಿ ಸಾಲಿಮಠ, ನಿವೃತ್ತ ಸೈನಿಕರಾದ ಸಂಗನಾಳ, ಮಲ್ಲನಗೌಡ್ರ, ನಿವೃತ್ತ ಪ್ರಾಚಾರ್ಯ ಡಿ.ಎ ಅರವಟಗಿಮಠ, ಡಾ. ಆರ್.ಕೆ ಗಚ್ಚಿನಮಠ, ನಿವೃತ್ತ ಶಿಕ್ಷಕ ಎಂ.ಎಸ್ ದಢೇಸೂರಮಠ, ಶಿವಯೋಗಿ ಜಕ್ಕಲಿ, ಗುರುಪಾದಪ್ಪ ಬೆಲ್ಲದ, ಎಸ್.ಕೆ ಪಾಟೀಲ, ಸಿದ್ದಿಕಿ, ಮಹಾದೇವಪ್ಪ ಬೇವಿನಕಟ್ಟಿ, ಆದರ್ಶ ಕುಲಕರ್ಣಿ, ಮಲ್ಲಯ್ಯ ಗುಂಡಗೋಪುರಮಠ, ನಿಂಗರಾಜ ಬೇವಿನಕಟ್ಟಿ, ಜೆ.ಎ ಪಾಟೀಲ, ವಿ.ಎ ಕುಂಬಾರ, ಆರ್.ಎಸ್ ನರೇಗಲ್ಲ, ಬಿ.ಟಿ ತಾಳಿ, ಎಚ್.ವಿ ಈಟಿ, ಚಂದ್ರಾಮ ಗ್ರಾಮಪುರೋಹಿತ, ಮುಖ್ಯ ಶಿಕ್ಷಕ ಬಿ.ಬಿ ಕುರಿ, ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ. ಕುಲಕರ್ಣಿ ಇನ್ನೂ ಮುಂತಾದ ಗಣ್ಯರು ಪಾಲ್ಗೊಂಡಿದ್ದರು. ಈಶ್ವರ ಬೆಟಗೇರಿ ನಿರ್ವಹಿಸಿದರು.

### ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಡಾ.ಓದುಗೌಡರ

# ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಿ



■ವಿಜಯಸಾಕ್ಷಿ ಸುದ್ದಿ, ಗದಗ

ನಾವಿಂದು ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸುವ ಅಗತ್ಯವಿದೆ. ಅನಾರೋಗ್ಯಕ್ಕೆ ಸಂಬಂಧಿಸಿದ ಕಾಯಿಲೆಗಳು ದೊಡ್ಡದಿರಲಿ, ಸಣ್ಣದಿರಲಿ, ತಜ್ಞ ವೈದ್ಯರಲ್ಲಿ ತಪಾಸಣೆ ಮಾಡಿಸಿ ಔಷಧೋಪಚಾರ, ಚಿಕಿತ್ಸೆ ಕೈಗೊಳ್ಳಬೇಕು. ಅಲಕ್ಷಿಸಿದರೆ ಮುಂದೆ ದೊಡ್ಡ ಹಾನಿ ಅನುಭವಿಸಬೇಕಾದೀತು ಎಂದು ಸಂಕಲ್ಪ ಆಸ್ಪತ್ರೆಯ ಡಾ.ಅವಿನಾಶ ಓದುಗೌಡರ ಅಭಿಪ್ರಾಯಪಟ್ಟರು.

ಅವರು ಗುರುವಾರ ಗದುಗಿನ ನಾಲ್ವಾಡ ಓಣಿಯ ಡಾ. ವ್ಹಿ.ಸಿ ಕಲ್ಮಠ ಅವರ ಸಂಜೀವಿನಿ ಕ್ಲಿನಿಕ್ ಪ್ರಾಂಗಣದಲ್ಲಿ ನಗರದ ಹೆಲ್ಪಿಂಗ್ ಹ್ಯಾಂಡ್ಸ್ ಫೌಂಡೇಶನ್, ಅಪ್ಪುರಾಜ ಇವೆಂಟ್ಸ್, ಸಂಕಲ್ಪ ಮಲ್ಟಿ ಸ್ಪೆಷಲಿಸ್ಟ್ ಆಸ್ಪತ್ರೆ ಗದಗ, ರೋಟರಿ ಗದಗ ಸೆಂಟ್ರಲ್ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹೆಲ್ಪಿಂಗ್ ಹ್ಯಾಂಡ್ಸ್ ಫೌಂಡೇಶನ್ ಅಧ್ಯಕ್ಷ ಅಪ್ಪುರಾಜ ಭದ್ರಕಾಳಮ್ಮನಮಠ ಮಾತನಾಡಿ, ಪ್ರತಿ ವರ್ಷ ವೈವಿಧ್ಯಮಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗಿದೆ. ಸಾರ್ವಜನಿಕರು ಸಂಘಟನೆಯ ಈ ಎಲ್ಲ ಸಮಾಜಮುಖಿ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಳ್ಳಬೇಕೆಂದರು.

ವೇದಿಕೆಯ ಮೇಲೆ ರೋಟರಿ ಗದಗ ಸೆಂಟ್ರಲ್ ಅಧ್ಯಕ್ಷ ವಿಜಯಕುಮಾರ ಹಿರೇಮಠ, ಜ್ಯೋತಿ ಪಾಟೀಲ, ಶಿವಕುಮಾರ ಪವಾಡಶೆಟ್ಟರ ಉಪಸ್ಥಿತರಿದ್ದರು.

ಶಿವಯೋಗಿ ಟೆಂಗಿನಕಾಯಿ ಪ್ರಾರ್ಥಿಸಿದರು. ಬಸವರಾಜ ಜಿನಗಾ ಸ್ವಾಗತಿಸಿದರು. ರಾಜು ಹುಳ್ಳಿಗೌಡ್ರ ಪರಿಚಯಿಸಿದರು ಪ್ರಶಾಂತ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಪುರದ ಅಣ್ಣಿಗೇರಿ ನಿರೂಪಿಸಿದರು. ಹರೀಶ ಕಮ್ಮಾರ ವಂದಿಸಿದರು.

ನಂತರ ನಡೆದ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ತಜ್ಞ ವೈದ್ಯರಾದ ವ್ಹಿ.ಸಿ ಕಲ್ಮಠ, ಅವಿನಾಶ ಓದುಗೌಡರ, ಪವನಕುಮಾರ ಕೋಳಿವಾಡ, ದೀಪಕ ಕುರಹಟ್ಟಿ, ಶಿವಕುಮಾರ ಪವಾಡಶೆಟ್ಟರ, ಇರ್ಫಾನ್ ಮಕಾನದಾರ, ವಿನಯ ಮಸ್ತಣ್ಣವರ, ಮಹಾಲಕ್ಷ್ಮೀ ಕೋಳಿವಾಡ, ಜ್ಯೋತಿ ಪಾಟೀಲ ವೈದ್ಯ ತಂಡದಿಂದ ಕಿಡ್ನಿ, ಸ್ತ್ರೀರೋಗ, ನೇತ್ರ, ಶ್ವಾಸಕೋಶ, ನರರೋಗ, ಅನ್ನನಾಳ, ಪಿತ್ತಕೋಶ ಹಾಗೂ ಜನರಲ್ ಚೆಕ್‌ಅಪ್ ಉಚಿತ ಆರೋಗ್ಯ ತಪಾಸಣೆ ನಡೆಸಿ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್‌ನ ಸಹಾಯಕ ಡಿಸ್ಟ್ರಿಕ್ಟ್ ಗವರ್ನರ್ ಶರಣಬಸಪ್ಪ ಗುಡಿಮನಿ, ಮಂಜುನಾಥ ಕಬಾಡಿ, ಸುನೀಲ ಕಬಾಡಿ, ಶಿವಯ್ಯ ಭದ್ರಕಾಳಮ್ಮನಮಠ, ಕಿರಣ ಭೂಮಾ, ಈರಣ್ಣ ಲಕ್ಕುಂಡಿ, ವ್ಹಿ.ಕೆ ಮಟ್ಟಿ, ಪ್ರಕಾಶ ವೈಲಾಯ್, ಈಶಣ್ಣ ನಾಲ್ವಾಡ, ಸದಾಶಿವ ಮದರಿಮಠ, ರಾಜು ಕುರಡಗಿ, ವಿನಾಯಕ ಚನ್ನವೀರಶೆಟ್ಟರ, ಪ್ರವೀಣ ಗುಳೇದಗುಡ್ಡ, ಉಮೇಶ ದೇವಾಡಿಗ, ಸಿದ್ದಪ್ಪ ಹರ್ತಿ, ಸಿದ್ದಲಿಂಗೇಶ ಚನ್ನವೀರಶೆಟ್ಟರ, ಪ್ರಶಾಂತ ಕಪ್ಪತ್ತನವರ ಮುಂತಾದವರಿದ್ದರು.

ಶಿಬಿರದಲ್ಲಿ ಸುಮಾರು 120ಕ್ಕೂ ಹೆಚ್ಚು ಜನರು ತಪಾಸಣೆ ಮಾಡಿಸಿಕೊಂಡರು. ನೇತ್ರ ಹಾಗೂ ಕಿಡ್ನಿ ಶಸ್ತ್ರಚಿಕಿತ್ಸೆ ಅಗತ್ಯವಿದ್ದವರಿಗೆ ನಿಗದಿತ ದಿನಾಂಕ ನೀಡಿದ್ದು, ಸಂಕಲ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸೂಚಿಸಲಾಯಿತು.

### ಅ.31ಕ್ಕೆ ರಕ್ತದಾನ ಶಿಬಿರ

ಅ.31ರಂದು ಮಂಗಳವಾರ ಮುಂಜಾನೆ 10 ಗಂಟೆಗೆ ಗದುಗಿನ ನಾಲ್ವಾಡ ಓಣಿಯ ಡಾ. ವ್ಹಿ.ಸಿ ಕಲ್ಮಠ ಅವರ ಸಂಜೀವಿನಿ ಕ್ಲಿನಿಕ್ ಪ್ರಾಂಗಣದಲ್ಲಿ ಹೆಲ್ಪಿಂಗ್ ಹ್ಯಾಂಡ್ಸ್ ಫೌಂಡೇಶನ್, ಅಪ್ಪುರಾಜ ಇವೆಂಟ್ಸ್ ಹಾಗೂ ರೋಟರಿ ಗದಗ ಸೆಂಟ್ರಲ್‌ನಿಂದ ರಕ್ತದಾನ ಶಿಬಿರ ನಡೆಯಲಿದೆ ಎಂದು ಅಪ್ಪುರಾಜ್ ಭದ್ರಕಾಳಮ್ಮನಮಠ ತಿಳಿಸಿದ್ದಾರೆ.

# ನಡೆ-ನುಡಿಗಳು ಸಂಸ್ಕಾರದಿಂದ ಕೂಡಿರಲಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠವಾದ ಸಂಪತ್ತು ಎಂದರೆ ಅದು ತಾಯಿ. ತಾಯಂದಿರು ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡಿ, ಮಕ್ಕಳನ್ನು ದೇಶದ ಸಂಪತ್ತಾಗಿಸಬೇಕು ಎಂದು ಅತ್ತಿವೇರಿ ಬಸವಧಾಮದ ಪೂಜ್ಯಶ್ರೀ ಬಸವೇಶ್ವರಿಮಾತಾ ಅಭಿಪ್ರಾಯಪಟ್ಟರು.

ಅವರು ಪಟ್ಟಣದಲ್ಲಿ ದುರ್ಗಾದೌಡ ಕಾರ್ಯಕ್ರಮದ ಅಂಗವಾಗಿ ಮಾತಾ ಭಗಿನಿಯರಿಗೆ ಉಡಿ ತುಂಬುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಕ್ಕಳಿಗೆ ತಾಯಿಯ ಗರ್ಭದಲ್ಲಿದ್ದಾಗಲೇ ಸಂಸ್ಕಾರ ದೊರೆಯಬೇಕು. ನಮ್ಮ ನಡೆ-ನುಡಿಗಳು ಸಹ ಸಂಸ್ಕಾರದಿಂದ ಕೂಡಿರಬೇಕು ಎನ್ನುವ ಅರಿವು ಇರಬೇಕು ಎಂದು ನುಡಿದರು.

ಗಂಜಿಗಟ್ಟಿಯ ಡಾ.ಶಿವಲಿಂಗೇಶ್ವರ ಶಿವಾಚಾರ್ಯರರು ಸಾನ್ನಿಧ್ಯ ವಹಿಸಿದ್ದರು. ದಸರಾ ಉತ್ಸವ ಸಮಿತಿ ಮುಖ್ಯಸ್ಥ ಗುರುನಾಥ ದಾನಪ್ಪನವರ, ಅಧ್ಯಕ್ಷ ಬಸವರಾಜ ಅರಳಿ ಬಸವರಾಜ ಬಾಳೇಶ್ವರಮಠ, ಚಂಬಣ್ಣ ಬಾಳಿಕಾಯಿ, ಮಹೇಶ ಹೊಗೆಸೊಪ್ಪಿನ ಮಾತನಾಡಿದರು. ದಸರಾ ಉತ್ಸವ ಸಮಿತಿ ನೂತನ ಅಧ್ಯಕ್ಷರಾಗಿ ದೇವಿಂದ್ರಪ್ಪ ಗಡೇದ, ಕಾರ್ಯದರ್ಶಿಯಾಗಿ ಮಲ್ಲನಗೌಡ ಪಾಟೀಲ ನೇಮಕವಾದರು. ರವಿ ಲಿಂಗಶೆಟ್ಟಿ, ಶಿವನಗೌಡ್ರ ಪಾಟೀಲ, ವೆಂಕರಡ್ಡಿ ಗಿರಡ್ಡಿ, ರಾಜಶೇಖರ ಶಿಗ್ಲಿಮಠ, ಜ್ಞಾನೋಬಾ ಬೋಮಲೆ, ಮುದಕಪ್ಪ ಮುಳಗುಂದ, ಶಿವಪ್ಪ ಡಂಬಳ, ಯಲ್ಲಪ್ಪ ಕೋರದಾಳ, ಮಂಜು ಬಳಿಗಾರ, ಪ್ರವೀಣ ಪಾಟೀಲ, ರಾಜೇಶ್ವರಿ ದಾನಪ್ಪನವರ, ಸುಜಾತಾ ಅತ್ತಿಗೇರಿ, ಪುಷ್ಪಾ ಅರಳಿ ಮುಂತಾದವರು ಪಾಲ್ಗೊಂಡಿದ್ದರು. ಸ್ನೇಹಾ ಹೊಟ್ಟಿ, ಜಯಪ್ರಕಾಶ ಹೊಟ್ಟಿ ನಿರೂಪಿಸಿದರು.

# ದಾಂಡಿಯಾ ಕಾರ್ಯಕ್ರಮ ಇಂದು



■ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ಇಲ್ಲಿನ ಎಸ್‌ಎಸ್‌ಕೆ ದಸರಾ ಉತ್ಸವ ಸಮಿತಿ ವತಿಯಿಂದ ಎಸ್‌ಎಸ್‌ಕೆ ಸಮಾಜದ ಮಹಿಳೆಯರಿಗಾಗಿ ಶುಕ್ರವಾರ ಸಾಯಂಕಾಲ 6 ಗಂಟೆಯಿಂದ 9 ಗಂಟೆಯವರೆಗೆ ದಾಂಡಿಯಾ ಕಾರ್ಯಕ್ರಮವನ್ನು ಬೆಟಗೇರಿಯ ಶ್ರೀಮತಿ ಮುನ್ನೂಬಾಯಿ ಈಶ್ವರಸಾ ಖೋಡೆ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಟಗೇರಿ ಶ್ರೀ ಜಗದಂಬಾ ಮಹಿಳಾ ಮಂಡಳದ ಪದಾಧಿಕಾರಿಗಳು, ಎಲ್ಲ ಸದಸ್ಯರು ಮತ್ತು ಎಸ್‌ಎಸ್‌ಕೆ ಸಮಾಜದ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಬೆಟಗೇರಿ ಶ್ರೀ ಜಗದಂಬಾ ಮಹಿಳಾ ಮಂಡಳದ ಅಧ್ಯಕ್ಷೆ ಗೀತಾ ಡಿ.ಬದಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡಕ್ಕೆ ಮತ್ತೆ ಮುಖಭಂಗವಾಗಿದ್ದು, ನೆರೆಯ ಶ್ರೀಲಂಕಾ ವಿರುದ್ಧ 8 ವಿಕೆಟ್ ಗಳ ಹೀನಾಯ ಸೋಲು ಕಂಡಿದೆ.

# ಪ್ರವಚನಕಾರರಿಗೆ ಗೌರವ ಸಮರ್ಪಣೆ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಗಂಗಾಪೂರ ಪೇಟೆಯ ದುರ್ಗಾದೇವಿ ದೇವಸ್ಥಾನದಲ್ಲಿ ಶರನ್ನವರಾತ್ರಿ ನಿಮಿತ್ತ ದೇವಿ ಪುರಾಣ ಪ್ರವಚನ ಮಾಡಿದ ವೇ.ಮೂ ಚನ್ನವೀರಸ್ವಾಮಿಗಳಿಗೆ ದುರ್ಗಾದೇವಿ ಪತಂಜಲಿ ನಿರಂತರ ಉಚಿತ ಯೋಗ ಕಕ್ಷೆಯಿಂದ ಶಾಲು ಹೊದೆಸಿ ಫಲಪುಷ್ಪ ನೀಡಿ ಗೌರವಿಸಿ ಸನ್ಮಾನಿಸಲಾಯಿತು.

ಗದಗ ಜಿಲ್ಲಾ ಮಹಿಳಾ ಪತಂಜಲಿ ಯೋಗ ಸಮಿತಿಯ ಜಿಲ್ಲಾ ಕಾರ್ಯದರ್ಶಿ ನಾಗರತ್ನಾ ಬಡಿಗಣ್ಣವರ ಹಾಗೂ ಮಧುಕೋಟಿ ಯೋಗ ಶಿಕ್ಷಕರ ನೇತೃತ್ವದಲ್ಲಿ ನಡೆದ ಸಮಾರಂಭದಲ್ಲಿ ಯೋಗ ಸಾಧಕರಾದ ರೇಖಾ ಜಡಿಯವರ, ನಿರ್ಮಲಾ ಪಾಟೀಲ, ಕವಿತಾ ಇಮ್ರಾಪೂರ, ಶಾಂತಕ್ಕ ಹಾಲಜ್ಜಿ, ಅರ್ಪಿತಾ, ಸೃಷ್ಟಿ, ಲಕ್ಷ್ಮಿ, ನಿರೀಕ್ಷಾ, ಅನುಪಮಾ, ಸಂಗೀತಾ, ಅಂಜನಾ, ಸಾತ್ವಿಕ್, ಗೌತಮ, ಆರ್ಯನ್ ಮುಂತಾದವರು ಉಪಸ್ಥಿತರಿದ್ದರು.

## ನಿಧನ ವಾರ್ತೆ

### ಸಂಕಮ್ಮ ರಾಯನಗೌಡ್ರ



**ಲಕ್ಕೇಶ್ವರ:** ತಾಲೂಕಿನ ಗೋವನಾಳ ಗ್ರಾಮದ ಸಂಕಮ್ಮ ರಾಯನಗೌಡ್ರ(90) ಗುರುವಾರ ನಿಧನರಾಗಿದ್ದಾರೆ.

ಮೃತರು ಓರ್ವ ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ಚನ್ನಮ್ಮ ಜಯಂತಿ' ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ ಅಭಿಮತ

# 'ಚನ್ನಮ್ಮಳ ವೀರಗಾಥೆ ಯುವ ಸಮೂಹಕ್ಕೆ ಪ್ರೇರಣೆ'



ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಸಿದ್ದಪ್ಪ ಬಂಡಿ ಮಾತನಾಡಿ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಕಪಿಮುಷ್ಟಿಯಲ್ಲಿದ್ದ ನಾಡನ್ನು ಸ್ವತಂತ್ರಗೊಳಿಸಲು ಸಶಸ್ತ್ರದ ಮೂಲಕ ಹೋರಾಟ ಆರಂಭಿಸಿದ್ದ ಚನ್ನಮ್ಮಳನ್ನು ಬಂಧಿಸಲು ಬ್ರಿಟಿಷರು ಹೆಣೆದಿದ್ದ ಹಣದ ಬಲೆಗೆ ಅಂದು ಕೆಲವರು ಮರುಳಾಗಿ ಬ್ರಿಟಿಷರೊಂದಿಗೆ ಶಾಮಿಲಾಗಿದ್ದರ ಪರಿಣಾಮ ರಾಣಿ ಚನ್ನಮ್ಮ ಬಂಧನಕ್ಕೆ ಒಳಗಾದಳು. ಬ್ರಿಟಿಷರ ವಿರುದ್ಧ ನಡೆದ ಮೊದಲ ದಂಗೆಯಲ್ಲಿ ವಿಜಯ ಸಾಧಿಸಿದ್ದ ಚನ್ನಮ್ಮ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ಸಿಂಹ ಸ್ವಪ್ನವಾಗಿ ಕಾಡಿದ್ದರು ಎಂದರು.

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಮುನ್ನುಡಿ ಬರೆದ ಕಿತ್ತೂರು ರಾಣಿ ಚನ್ನಮ್ಮಳ ಶೌರ್ಯ ಹಾಗೂ ಸಾಹಸ ಯುವ ಸಮೂಹಕ್ಕೆ ಪ್ರೇರಣೆಯಾಗಲಿ ಎಂದು ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ ಹೇಳಿದರು.

ಇಲ್ಲಿನ ಗದಗ ರಸ್ತೆಯ ಡಾ.ಬಾಬು ಜಗಜೀವನರಾಮ್ ಸಮುದಾಯ ಭವನದಲ್ಲಿ ತಾಲೂಕಾಡಳಿತ, ತಾ.ಪಂ ಹಾಗೂ ಕಿತ್ತೂರು ರಾಣಿ ಚನ್ನಮ್ಮ ಜಯಂತ್ಯುತ್ಸವ ಸಮಿತಿಯಿಂದ ಗುರುವಾರ ನಡೆದ 'ಚನ್ನಮ್ಮ ಜಯಂತಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಸಂಗ್ರಾಮ, ಸಿಪಾಯಿ ದಂಗೆಯ ಪೂರ್ವದಲ್ಲಿ ತನ್ನ ಕುಟುಂಬವನ್ನು ಕಳೆದುಕೊಂಡರೂ ಎದೆಗುಂದದೆ, ನಾಡಿನ ರಕ್ಷಣೆಗಾಗಿ ಬ್ರಿಟಿಷರ ವಿರುದ್ಧ ಹೋರಾಡಿದ ಚನ್ನಮ್ಮಳ ಧೈರ್ಯವನ್ನು ಜಾನಪದರು ಲಾವಣಿ ಮತ್ತು ಗೀಗಿ ಪದಗಳ ರೂಪದಲ್ಲಿ ನಾಯಕಿ ಎಂದು ಕರೆದಿರುವುದು ಚೆನ್ನಮ್ಮನ ವೀರಗಾಥೆಗೆ ಸಾಕ್ಷಿ ಎಂದರು.

ಧಾರಾವಾಡ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸಕ ಡಾ. ರುದ್ರೇಶ ಮೇಟಿ ಮಾತನಾಡಿ, ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಿತ್ತೂರು ರಾಣಿ ಚನ್ನಮ್ಮ ಬಾಲ್ಯದಲ್ಲೇ ಕುದರೆ ಸವಾರಿ, ಕತ್ತಿ ವರಸೆ ಸೇರಿ ಬಿಲ್ಲುಗಾರಿಕೆಯಲ್ಲಿ ತರಬೇತಿ ಪಡೆದಿದ್ದರು. ಶಸ್ತ್ರಾಭ್ಯಾಸದೊಂದಿಗೆ ರಾಮಾಯಣ, ಮಹಾಭಾರತ ಅಧ್ಯಯನ ಹಾಗೂ ಧಾರ್ಮಿಕ ವಿಚಾರಗಳು ಚನ್ನಮ್ಮಳನ್ನು ವೀರ ವನಿತೆಯನ್ನಾಗಿ ಮಾಡಿತು. ಗಂಡನ ಮರಣದ ನಂತರ ರಾಜ್ಯವನ್ನು ಮುನ್ನಡೆಸುತ್ತಾ ದತ್ತು ಮಗುವನ್ನು ಪಡೆದ ವಿಚಾರವು ಬ್ರಿಟಿಷರು ಸಿಟ್ಟಿಗೆ ಕಾರಣವಾಗಿ, ಸಾಮ್ರಾಜ್ಯದ ಮೇಲೆ ದಾಳಿ ನಡೆಸಿದ ಬ್ರಿಟಿಷರು ಖಜಾನೆಯಲ್ಲಿದ್ದ ಸಂಪತ್ತಿನ ಭಂಡಾರಕ್ಕೆ ಬೀಗ ಜಡಿದಿದ್ದರು ಎಂದರು. ಪುರಸಭೆ ಸದಸ್ಯ ಸುಭಾಸ ಮ್ಯಾಗೇರಿ, ತಾ.ಪಂ ಇಒ ಡಾ. ಡಿ.ಮೋಹನ, ಮುಖಂಡರಾದ ಮುತ್ತಣ್ಣ ಮ್ಯಾಗೇರಿ, ಚಂಬಣ್ಣ ಚವಡಿ, ಬಿ.ಎಸ್ ಬಸನಗೌಡ್ರ, ಪ್ರಭು ಚವಡಿ, ಅಮರೇಶ ಮಾರನಬಸರಿ, ವಿರೇಶ ಸಂಗಮದ, ಉಮೇಶ ಅರಳಿಗಿಡದ, ಗಣೇಶ ಕೊರಡಕೇರಿ, ಮಾರುತಿ ಅವಧೂತ ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka